# ಕಾಳಿ ನ್ಯೂಸ್

ಸತ್ಯ ಒಂದೇ ನಿತ್ಯ

ಕನ್ನಡಿಗರ ಹೆಮ್ಮೆಯ ವಾರಪತ್ರಿಕೆ

ವ್ಯವಸ್ಥಾಪಕ ಸಂಪಾದಕ : ಎನ್. ಜಯಚಂದ್ರನ್ Chief Editor : N. Jayachandran

**KALI NEWS** Kannada Weekly Published from Dandeli

Regd. No. P MG/KA/NK 587 E-mail : kalinews@rediff.com

ಸಂಪುಟ -2, ಸಂಚಿಕೆ 100 RNI NO. KARKAN / 12814/10/1/2001-TC *DANDELI* 12 ಎಪ್ರಿಲ 2003 ☎ 08284-333883 ಪುಟ - 6 ರೂ. 3.00


# ಕಾಗದ ಕಾರಖಾನೆಯ ಕುಟೀಲೋಪಾಯದ ನಡುವೆ ಪಟ್ಟು ಬಿಡದ ಪರಿಸರವಾದಿ ಪಾಂಡುರಂಗ ಹೆಗಡೆಯಿಂದ 'ಕಾಳಿ ಬಚಾವೋ ಆಂದೋಲನ'ಕ್ಕೆ ನಾಂದಿ



ಕರಿಯಂಪಾಳಿಯಲ್ಲಿ ಕಾಳಿ ನದಿಗೆ ಕಾಗದ ಕಾರ್ಖಾನೆಯ ತ್ಯಾಜ್ಯ ನದಿಯ ಅರ್ಧ ಭಾಗ ಆವರಿಸಿರುವ ದೃಶ್ಯ.



ಕಾಗದ ಕಾರಖಾನೆಯ ಅಧಿಕಾರಿಗಳು ಈ ಮಲೀನ ನೀರು ಕುಡಿಯಲು ಯೋಗ್ಯ ಎಂದು ಹೇಳಿದಾಗ ಪಾಂಡುರಂಗ ಹೆಗಡೆ ಈ ನೀರನ್ನು ಕುಡಿದು ತೋರಿಸಲು ಆಗ್ರಹಿಸುತ್ತಿರುವ ದೃಶ್ಯ. ಸಹಾಯಕ ಕಮೀಷನರ್, ತಹಶೀಲದಾರ ಚಿತ್ರದಲ್ಲಿದ್ದಾರೆ.



ಕಾಳಿ ಬಚಾವೋ ಆಂದೋಲನ ದಲ್ಲಿ ಪರಿಸರವಾದಿ ಪಾಂಡುರಂಗ ಹೆಗಡೆ ಸಹಾಯಕ ಕಮೀಷನರ ಎ. ಜಿ. ಧುಮಾಳೆ ಅವರಿಗೆ ಅರ್ಪಿಸುತ್ತಿರುವ ದೃಶ್ಯ.

ದಾಂಡೇಲಿ:ತಾಲೂಕಿನ ಹಾಳಮಡ್ಡಿಯಲ್ಲಿ ಕಾಗದ ಕಾರ್ಖಾನೆಯಿಂದ ತ್ಯಾಜ್ಯ (ಮಲೀನ) ನೀರನ್ನು ಬಿಡುತ್ತಿರುವ ಸೇತುವೆ ಮೇಲೆ ಕಾಳಿ ಬಚಾವೋ ಆಂದೋಲನವನ್ನು ಪರಿಸರವಾದಿ ಪಾಂಡುರಂಗ ಹೆಗಡೆ ಸಾಂಕೇತಿಕವಾಗಿ ಏ 3ರ ಬೆಳಿಗ್ಗೆ 10.00 ಗಂಟೆಗೆ ಪ್ರತಿಭಟನೆ ಮೂಲಕ ಆರಂಭಿಸಿದರು.

ಪ್ರತಿಭಟನೆಗೆ ಜನರು ಸಾಕಷ್ಟು ಸಂಖ್ಯೆಯಲ್ಲಿ ಸೇರದಂತೆ ವೆಸ್ಟ ಕೋಸ್ಟ ಕಾಗದ ಕಾರ್ಖಾನೆ ಆಡಳಿತ ಮಂಡಳಿ ಹಾಗೂ ಕೆಲವರು ಪ್ರತಿಭಟನೆ ರದ್ದಾಗಿದೆ ಎಂದು ಸುಳ್ಳು ವದಂತಿ ಹರಡಿ ಬೆದರಿಕೆ ಹಾಕಿದ್ದನ್ನು ಪಾಂಡುರಂಗ ಹೆಗಡೆ ಬಹಿರಂಗವಾಗಿ ಖಂಡಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಕಮಿಷನರ್ ಎ. ಜೆ. ಧುಮಾಳೆ, ತಹಶೀಲ್ದಾರ ಜಿ. ಎಸ್. ಭಟ್ಟ ಹಾಗೂ ಕಾಗದ ಕಾರ್ಖಾನೆ ಅಧಿಕಾರಿಗಳು ಆಗಮಿಸಿ ಅವರೊಡನೆ ಚರ್ಚಿಸಿದಾಗ ಈ ಮಲೀನ ನೀರಿನಿಂದ ತೊಂದರೆಗೊಳಗಾಗಿರುವ ಹಳ್ಳಿಗಳನ್ನು ವೀಕ್ಷಿಸಲು ನಿರ್ಧರಿಸಲಾಯಿತು. ಅದೇ ಸಂದರ್ಭದಲ್ಲಿ ಕಾಗದ ಕಾರ್ಖಾನೆಯ ಅಧಿಕಾರಿಗಳು ಈ ನೀರು ಕುಡಿಯಲು ಯೋಗ್ಯವೆಂದು ಹೇಳಿದಾಗ ಬಕೇಟೊಂದರಲ್ಲಿ ನೀರನ್ನು ತಂದು ಸಹಾಯಕ ಕಮಿಷನರ್ ಎದುರಿಗೆ ಈ ನೀರನ್ನು

2 ನೇ ಪುಟಕ್ಕೆ ......



ಮಲೀನ ನೀರು ಕುಡಿದು ರೋಗ ಗ್ರಸ್ಥವಾಗಿ ಸಾವಿನಂಚಿನಲ್ಲಿರುವ ಜರ್ಸಿ ಆಕಳು.

ಬೆಳೆ ಹಾಳಾಗಿರುವುದನ್ನು ಈ ಬೆಳೆಗೆ ನೀರು ಹಾಯಿಸಿದಾಗ ಅವು ಗಟ್ಟಿಯಾದ ಪದರಿನಂತೆ ನಿಂತಿರುವುದನ್ನು ಭೂಮಿಯಿಂದ ಕಿತ್ತು ಪಾಂಡುರಂಗ ಹೆಗಡೆ ಪ್ರದರ್ಶಿಸಿದರು. ನದಿಯಲ್ಲಿರುವ ಹೂಳನ್ನು ಪ್ರತ್ಯಕ್ಷ ಕಂಡರು. ಈ ಸಂದರ್ಭದಲ್ಲಿ ರೈತ ಪಾಂಡುರಂಗ ಪಾಟೀಲ ಈ ನೀರಿನ ಬಳಕೆಯಿಂದ ತಮಗಾಗಿರುವ ಹಾನಿಯನ್ನು ವಿವರಿಸಿದರು.

ಅಲ್ಲಿಂದ ಕರಿಯಂಪಾಳಿಗೆ ಹೋದಾಗ ಅಲ್ಲಿ ತರಕಾರಿ ಬೆಳೆ ಒಣಗಿ ಸುಟ್ಟು ಕರಕಲಾಗಿರುವುದನ್ನು ಪ್ರತ್ಯಕ್ಷ ಕಂಡರು. ಈ ಸಂದರ್ಭದಲ್ಲಿ ಕಾಗದ ಕಾರ್ಖಾನೆಯ ನಿಯೋಜಿಸಿದ ಒಂದಿಬ್ಬರು ಗಲಾಟೆಗೆ ಪ್ರಯತ್ನಿಸಿದಾಗ ಅವರಿಗೆ ಕಾಗದ ಕಾರ್ಖಾನೆಯ ಅಧಿಕಾರಿಗಳು ಕುಡಿದು ತೋರಿಸಲಿ ಎಂದು ಪಾಂಡುರಂಗ ಹೆಗಡೆ ಹೇಳಿದಾಗ ಕಕ್ಕಾಬಿಕ್ಕಿಯಾದ ಅಧಿಕಾರಿಗಳು ನೀರನ್ನು ಕುಡಿಯಲು ನಿರಾಕರಿಸಿದರು. ಹಾಗಾದರೆ ಕುಡಿಯಲು ಬಳಕೆಗೆ ಯೋಗ್ಯವೆಂದು ಹೇಗೆ ವಾದಿಸುತ್ತೀರಿ ಎಂದು ಅವರನ್ನು ತರಾಟೆಗೆ ತೆಗೆದುಕೊಂಡರು.

ನಂತರ ಹಾಲಮಡ್ಡಿ ಗ್ರಾಮಕ್ಕೆ ಸಹಾಯಕ ಕಮಿಷನರ್, ತಹಶೀಲ್ದಾರ ಸಮಕ್ಷಮ ಪ್ರತಿಭಟನಾ ತಂಡ ಭೇಟಿ ಕೊಟ್ಟಾಗ ತರಕಾರಿ



U.S. ಎನ್ನುವ UselesS ತಿಂಡಿಯನ್ನು ಬೆಂಡೆ ಗೊಜ್ಜಿನೊಂದಿಗೆ ಅದ್ದಿ ತಿಂಡಿ ಪೋಕ ತಿವಾರಿಗೆ West Coast (ಪೂರ್ವ ಪಶ್ಚಿಮ) ತಿನಿಸಬೇಕಿದೆ. ಆ- ಸೂಪಾ ರಕ್ಷಣಾ ಗೋಡೆ ಭೇದಿಸಬೇಕಿದೆ.

ಸ್ಥಳೀಯರಿಂದ ಭಾರೀ ವಿರೋಧ ವ್ಯಕ್ತವಾಯಿತು.

ಈ ಮಲೀನ ನೀರನ್ನು ಕುಡಿದು ಸಾವಿನಂಚಿನಲ್ಲಿರುವ ಜಾನುವಾರುಗಳ ಸ್ಥಿತಿಯನ್ನು ಸ್ಥಳೀಯ ರೈತರಾದ ಎಸ್. ಆರ್. ಗುಂಡೂಪಕರ ಹಾಗೂ ಕುಂಬೇರಕರ ಸಹಾಯಕ ಕಮಿಷನರ್‌ರಿಗೆ ವಿವರಿಸಿದರು. ನದಿಯ ತೀರಕ್ಕೆ ಕರೆದುಕೊಂಡು ಹೋದಾಗ ಅರ್ಧ ಭಾಗ ಪಲ್ಪಿನ ಕಲ್ಮಶದಿಂದ ತುಂಬಿರುವುದನ್ನು ಕಂಡರು. ಪುನಃ ಹಾಳಮಡ್ಡಿ ಸೇತುವೆಗೆ ಬಂದು ಪ್ರತಿಭಟನಾಕಾರರು ಪಾಂಡುರಂಗ ಹೆಗಡೆಯವರ ನೇತೃತ್ವದಲ್ಲಿ ಸಹಾಯಕ ಕಮಿಷನರ್‌ರವರಿಗೆ ಮನವಿ



ಮಲೀನ ನೀರಿನಿಂದ ಸಣಕಲಾಗಿ ರೋಗಗ್ರಸ್ಥವಾಗಿರುವ ಜಾನುವಾರುಗಳನ್ನು ಸಹಾಯಕ ಕಮೀಷನರ್ ವೀಕ್ಷಿಸಿದರು.



ಸಹಾಯಕ ಕಮೀಷನರ್ ತರಕಾರಿ ಬೆಳೆ ಹಾಳಾಗಿರುವುದನ್ನು ವೀಕ್ಷಿಸುತ್ತಿದ್ದಾರೆ.

ಅರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪಾಂಡುರಂಗ ಹೆಗಡೆ ಅವರು ನಾವು ಕಾಗದ ಕಾರ್ಖಾನೆಯನ್ನು ಮುಚ್ಚಲು ಹೊರಟಿಲ್ಲ. ಕಾಗದ ಕಾರ್ಖಾನೆಯನ್ನು ಮುಚ್ಚಲಾಗುತ್ತಿದೆ ಎಂದು ಸುಳ್ಳು ವದಂತಿಯನ್ನು ಕಾಗದ ಕಾರ್ಖಾನೆಯವರು ಹರಡಿ ಪ್ರತಿಭಟನೆಗೆ ಬರುವ ಜನರಿಗೆ ಬೆದರಿಕೆಯೊಡ್ಡಿದ್ದಲ್ಲದೇ ತಮಗೂ ದೂರವಾಣಿಯ ಮೂಲಕ ಜೀವ ಬೆದರಿಕೆ ಹಾಕಿದ್ದನ್ನು ಬಲವಾಗಿ ಖಂಡಿಸಿದರು. ಕಾಗದ ಕಾರ್ಖಾನೆಯ ಈ ಕಲುಷಿತ ನೀರು ಜನ-ಜಾನುವಾರು, ಕಾಡು ಪ್ರಾಣಿಗಳ ಜೀವಕ್ಕೆ ಅಪಾಯ ಬಂದಿದೆ. ಮೀನು ಹಾಗೂ ಇತರ ಜಲಚರ ಜೀವಿಗಳ ಉಳಿವಿಗೆ ಇದು ಅಪಾಯಕರವಾಗಿದೆ. ದಾಂಡೇಲಿಯಿಂದ ಕಾರವಾರದವರೆಗೆ ಈ ಕಾರ್ಖಾನೆಯ ತ್ಯಾಜ್ಯವು ಜನಜೀವನವನ್ನು ನಾಶ ಮಾಡುತ್ತಿದೆ. ಕಾಳಿನದಿ ಉಳಿಯಬೇಕಾದರೆ ಈ ಕಾರ್ಖಾನೆ ತ್ಯಾಜ್ಯವು ನಿಲ್ಲಬೇಕು. ಕಾರ್ಖಾನೆಯ ಆಡಳಿತ ಮಂಡಳಿಯು ತ್ಯಾಜ್ಯದಿಂದ ಅಪಾಯವಿಲ್ಲವೆಂದು ಹೇಳುತ್ತಿರುವುದು ಸತ್ಯಕ್ಕೆ ದೂರವಾಗಿದ್ದು, ಇದರಿಂದ ಆಗುತ್ತಿರುವ ಅಪಾಯವನ್ನು ತಾವೇ ಸ್ವಂತ ಬಂದು ನೋಡಬೇಕೆಂದು ವಿನಂತಿಸಿದರು. ಕಾಳಿನದಿಗೆ ಕಾರ್ಖಾನೆಯಿಂದ ಬಿಡುವ ತ್ಯಾಜ್ಯವನ್ನು ತಕ್ಷಣ ನಿಲ್ಲಿಸಿ ಸರಿಯಾದ ಪರಿಷ್ಕರಣೆ ಮಾಡಿ ಶುದ್ಧೀಕರಿಸಿ ನದಿಗೆ ಬಿಡಬೇಕು. ಕಲುಷಿತ ನೀರಿನಿಂದ ಆಗಿರುವ ಜನ-ಜಾನುವಾರುಗಳ ಹಾನಿಯನ್ನು ಕಾರ್ಖಾನೆ ತುಂಬಿ ಕೊಡಬೇಕು. ಕಲುಷಿತ ನೀರನ್ನು ಜಂಟಿ ಪರೀಕ್ಷೆಗೆ ಅವಕಾಶ ಮಾಡಿಕೊಡಬೇಕು. ಈಗಾಗಲೇ ಕಾಳಿನದಿಗೆ ವಿಷವುಣಿಸಿದ ಬಗ್ಗೆ ಕಾರ್ಖಾನೆ ವಿರುದ್ಧ ಕ್ರಮ ಜರುಗಿಸಬೇಕೆಂದು ಮನವಿಯಲ್ಲಿ ಮಂಡಿಸಿದ್ದಾರೆ.



ರೈತ ಪಾಂಡುರಂಗ ಪಾಟೀಲ ಮಲೀನ ನೀರಿನಿಂದ ಬೆಳೆ ಹಾನಿ ಸಂಭವಿಸಿರುವುದನ್ನು ವಿವರಿಸುತ್ತಿರುವ ದೃಶ್ಯ

## 48 ಸಾವಿರ ರೂ. ಅಕ್ರಮ ಬೀರ್ ಜಪ್ತಿ

ಮುಂಡಗೋಡ: ಇಲ್ಲಿಯ ಬಂಕಾಪುರ ರಸ್ತೆಯ ಪಕ್ಕದ ಬಿಡಾರವೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 80 ಬೀರ್ ಬಾಕ್ಸಗಳನ್ನು ಅಬಕಾರಿ ಇಲಾಖೆ ಸಿಬ್ಬಂದಿಗಳು ಇತ್ತೀಚೆಗೆ ವಶಪಡಿಸಿಕೊಂಡಿದ್ದು ಇದರ ಮೌಲ್ಯ ಸುಮಾರು 48,000 ರೂ.ಗಳಾಗಬಹುದೆಂದು ಅಂದಾಜಿಸಲಾಗಿದೆ.

ಈ ಬಗ್ಗೆ ದೊರೆತ ಖಚಿತ ಸುಳಿವಿನ ಹಿನ್ನಲೆಯಲ್ಲಿ ಪರಿಶೀಲನೆ ನಡೆಸಿದಾಗ ಈ ಬೀರ್ ಬಾಕ್ಸಗಳನ್ನು ಪತ್ತೆಯಾದವೆಂದು ತಿಳಿಸಲಾಗಿದೆ. ಇದನ್ನು ಯಾರು ಸಂಗ್ರಹಿಸಿಟ್ಟಿದ್ದರು ಎಂಬುದು ಗೊತ್ತಾಗಿಲ್ಲವಾಗಿದ್ದು ತನಿಖೆ ಮುಂದುವರೆದಿದೆ. ಮಂಗಳೂರಿನ ಅಬಕಾರಿ ಜಂಟಿ ಆಯುಕ್ತರಾದ ರುದ್ರಾ, ನಾಯಕರವರ ಮಾರ್ಗದರ್ಶನ ಹಾಗೂ ಅಬಕಾರಿ ಉಪ ಅಧೀಕ್ಷಕರಾದ ಪಿ. ವಿ. ಬೋರಕರ್ ನಿರ್ದೇಶನದಂತೆ ಈ ಕಾರ್ಯಾಚರಣೆಯನ್ನು ಮಾಡಲಾಯಿತೆಂದು ಶಿರಸಿ ಉಪವಿಭಾಗದ ಅಬಕಾರಿ ಉಪ ನಿರೀಕ್ಷಕರಾದ ಕೆ. ಟಿ. ಮೊಗೇರ ತಿಳಿಸಿದ್ದಾರೆ.

ಅಬಕಾರಿ ಸಿಬ್ಬಂದಿಗಳಾದ ಎಂ.ವಿ. ಮಲ್ಲೂರು, ಪಿ. ಎಸ್. ಪಾವಸ್ಕರ್, ಎ. ಜಿ. ನಾಯ್ಕ, ಕೋಳೂರುಮಠ, ಎಲ್.ವಿ. ಬೋರಕರ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮದ್ಯದಂಗಡಿ ಹೊಂದಿರುವ ವ್ಯಕ್ತಿಯೋರ್ವ ಈ ಮದ್ಯವನ್ನು ಸಂಗ್ರಹಿಸಿಟ್ಟಿದ್ದರೆಂದು ಹೇಳಲಾಗಿದೆ.

## ಜೋಯಡಾ ಮರಮುಟ್ಟು ಸಂಗ್ರಹಾಲಯ ಸ್ಥಳಾಂತರಕ್ಕೆ ವಿರೋಧ

ಜೋಯಡಾ: ಜೋಯಿಡಾದ ಮರಮುಟ್ಟು ಸಂಗ್ರಹಾಲಯ ಕಾರವಾರ ವಿಭಾಗಕ್ಕೆ ಸ್ಥಳಾಂತರ ಮಾಡಿರುವುದು ತುಂಬಾ ದುರದೃಷ್ಟಕರವಾಗಿದ್ದು, ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ವಿ. ದೇಶಪಾಂಡೆಯವರಲ್ಲಿ ಚರ್ಚಿಸುವುದಾಗಿ ಜೋಯಡಾ ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ. ಎಲ್.ನಾಯ್ಕ ತಿಳಿಸಿದರು.

ಮರಮುಟ್ಟು ಸಂಗ್ರಹಾಲಯದ ಸ್ಥಳಾಂತರದ ಬಗ್ಗೆ ವಲಯ ಅರಣ್ಯಾಧಿಕಾರಿಗಳಲ್ಲಿ ಕೇಳಿದಾಗ ಇಲ್ಲಿಯ ಉತ್ಪನ್ನ ಗಣನೀಯವಾಗಿ ಕಡಿಮೆಯಾಗಿದೆ. ಅ... ಅಣಶಿಯಲ್ಲಿ ರಾಷ್ಟ್ರೀಯ ಉದ್ಯಾನವನ ಆಗುತ್ತಿರುವುದರಿಂದ ಜೋಯಿಡಾದ ಮರಮುಟ್ಟು ಸಂಗ್ರಹಾಲಯದ ಪ್ರದೇಶ ಕಡಿಮೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಸ್ಥಳಾಂತರಿಸಲಾಗಿದೆಯೆಂದು ತಿಳಿಸಿದ್ದಾರೆಂದರು.

ಈ ಮರಮುಟ್ಟು ಸಂಗ್ರಹಾಲಯವನ್ನು ಸ್ಥಳಾಂತರಿಸಿದ್ದರಿಂದ ಇಲ್ಲಿ ಕೆಲಸ ಮಾಡುತ್ತಿದ್ದ ದಿನಗೂಲಿ ಕಾರ್ಮಿಕರಿಗೆ ಕೆಲಸವಿಲ್ಲದಂತಾಗಿದ್ದು ತೀವ್ರ ತೊಂದರೆಗೆ ಒಳಗಾಗಿದ್ದಾರೆ. ಅವರ ಬದುಕು ಬೀದಿಗೆ ಬಿದ್ದಂತಾಗಿದೆ. ಈ ಹಿನ್ನಲೆಯಲ್ಲಿ ಉಸ್ತುವಾರಿ ಸಚಿವರಲ್ಲಿ ಚರ್ಚಿಸುವುದಾಗಿ ಮತ್ತು ಅಗತ್ಯ ಬಂದರೆ ಹೋರಾಟ ನಡೆಸುವುದಾಗಿ ಕೆ. ಎಲ್.ನಾಯ್ಕ ಹೇಳಿದ್ದಾರೆ.

ಕಾಳಿ ನ್ಯೂಸ್ 100ನೇ ಸಂಚಿಕೆ



# ಸತ್ಯಕ್ಕೆ ಬೆಂಬಲಿಸಿ

## ಸಂಪಾದಕೀಯ

'ಕಾಳಿ ನ್ಯೂಸ್' ತನ್ನ ನೂರನೇ ಸಂಚಿಕೆಯನ್ನು ಹೊರ ತಂದಿದೆ. ಈ ಸಂದರ್ಭದಲ್ಲಿ ನಮ್ಮೆಲ್ಲ ಚಂದಾದಾರರು, ಓದುಗರು, ಜಾಹೀರಾತು ನೀಡಿ ಸಹಕರಿಸಿದವರನ್ನೆಲ್ಲ ಸ್ಮರಿಸಿ ಕೃತಜ್ಞತೆ ಸಲ್ಲಿಸುತ್ತ ಇನ್ನು ಮುಂದೆಯೂ ನಿಮ್ಮ ಪ್ರೋತ್ಸಾಹ, ಆಶೀರ್ವಾದ ಪತ್ರಿಕೆಯ ಮೇಲಿರಲಿ.

ಓದುಗರೇ ಪತ್ರಿಕೆಗೆ 'ಶ್ರೀರಕ್ಷೆ' ಎಂಬ ತತ್ವದಲ್ಲಿ ನಂಬಿಕೆ ಉಳಿಸಿಕೊಂಡಿರುವವನು ನಾನು. ಪತ್ರಿಕೆಯ ಧ್ಯೇಯ, ಉದ್ದೇಶಗಳಿಗೆ ಪೂರಕವಾಗಿ ನಿರ್ಭಿಡೆಯಿಂದ ಮುನ್ನಡೆದು ಮೂರನೇ ವರ್ಷಕ್ಕೆ 'ಕಾಳಿ ನ್ಯೂಸ್' ಕಾಲಿಡುತ್ತಿದೆ.

ಸಂಪಾದಕನಾಗಿ ಓದುಗರೊಂದಿಗೆ ಇತ್ತೀಚಿನ ಕೆಲ ಆಗು- ಹೋಗುಗಳ ಕುರಿತು ಹಂಚಿಕೊಳ್ಳ ಬಯಸುತ್ತೇನೆ. 'ಕಾಳಿನ್ಯೂಸ್' ಕಾಳಿ ಮಲೀನತೆ ಕುರಿತಂತೆ ಹೋರಾಟದಲ್ಲಿ ಪಾಲ್ಗೊಂಡಿದೆ. 'ಕಾಳಿ ಬಚಾವೋ' ಆಂದೋಲನಕ್ಕೆ ನಾಂದಿಯಾಗಿದೆ. ಆದರೆ ಈ ನಡುವೆ ಉಂಟಾಗಿರುವ ಗೋಜಲುಗಳ ಕುರಿತು ನಿಮ್ಮೊಂದಿಗೆ ಮಾತನಾಡಬೇಕಿದೆ. ಕಳೆದ ಹಲವಾರು ವರ್ಷಗಳಿಂದ ಕಾಳಿ ಮಲೀನವಾಗಿ ಹರಿದು ಸುತ್ತಮುತ್ತಲಿನ ಹಳ್ಳಿಗರಿಗೆ ಕಾಗದ ಕಾರ್ಖಾನೆ ತ್ಯಾಜ್ಯವನ್ನು ಉಣಿಸುತ್ತಿದೆ. ಈ ಬಗ್ಗೆ ಎಲ್ಲೋ ಒಂದೆಡೆ ಅಪಸ್ವರ ಕೇಳಿ ಬಂದು ಒಂದು ಪತ್ರಿಕಾ ಹೇಳಿಕೆ ನಂತರ ಒಂದು ಸ್ಪಷ್ಟೀಕರಣದೊಂದಿಗೆ ಮುಕ್ತಾಯವಾಗುತ್ತಿತ್ತು. ಆದರೆ ಯಾರು ಹೋರಾಟ ಮಾಡುತ್ತೇನೆಂದು ಮುಂದೆ ಬರುತ್ತಿರಲಿಲ್ಲ. ಈ ಸಂದರ್ಭದಲ್ಲಿ ಜಿಲ್ಲಾ ಎಸ್. ಸಿ. ಎಸ್. ಟಿ. ಕಾಂಗ್ರೆಸ್ ಅಧ್ಯಕ್ಷ ಸಿ. ಎನ್. ಜೋಗು ತಾವು ನದಿದಂಡೆ ಗುಂಟ ಇರುವ ಹಳ್ಳಿಗರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಹೋರಾಟ ಮಾಡುವುದಾಗಿ ಮುಂದೆ ಬಂದಾಗ ಹೊಸ ಹೋರಾಟಗಾರನಿಗೆ ಹೊಸ ಹುರುಪಿನಿಂದಲೇ ಪತ್ರಿಕೆ ಬೆಂಬಲಿಸಿದೆ. ಏಕೆಂದರೆ ನದಿಗುಂಟ ಇರುವವರಲ್ಲಿ ನಾನು ಒಬ್ಬ. ಮಾಧ್ಯಮಗಳ ಬೆಂಬಲ ಸಹಜವಾಗಿಯೇ ಜೋಗು ಅವರಿಗೆ ದೊರೆಯಿತು. ಪರಿಸರ ಹೋರಾಟಗಾರ ಪಾಂಡುರಂಗ ಹೆಗಡೆ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಸಹಜವಾಗಿ ಕಾರ್ಖಾನೆಯ ಆಡಳಿತ ಮಂಡಳಿ ಥರಥರಗುಟ್ಟಿತ್ತು. ನಂತರದ ಕ್ಷಿಪ್ರಗತಿಯ ಬೆಳವಣಿಗೆಯಲ್ಲಿ ಜೋಗು ನಿಯೋಜಿತ ರಸ್ತಾ ರೋಖೋ ಕಾರ್ಯಕ್ರಮವನ್ನು ಹಿಂತೆಗೆದುಕೊಂಡರು. ಆದರೆ ಪಾಂಡುರಂಗ ಹೆಗಡೆ ತಾವು ಒಬ್ಬರೇ ನಿಂತಾದರೂ ಪ್ರತಿಭಟನೆ ಮಾಡುತ್ತೇನೆ. ನೀವು ಬೆಂಬಲಿಸುವಿರಾ? ಎಂದಾಗ ನದಿ ಹಾಗೂ ಹಳ್ಳಿಗಳ ಹಿತದೃಷ್ಟಿಯಿಂದ ಬೆಂಬಲಿಸುವುದಾಗಿ ಸ್ಪಷ್ಟವಾಗಿ ಹೇಳಿದ್ದೇನೆ. ಆದರೆ ಈ ಸುದ್ದಿ ಕಾರ್ಖಾನೆಯ ಆಡಳಿತ ಮಂಡಳಿಗೆ ಇರುಸು ಮುರುಸಾಯಿತು. ಬೆಂಬಲಿಸದಂತೆ ಹಲವಾರು ರೀತಿಯ ಒತ್ತಡ ತಂದರು. ಕರಪತ್ರಗಳ ದಾಳಿ, ರಾಜಕೀಯ ನೇತಾರರುಗಳ ಹೇಳಿಕೆ, ಯಾರು ಭಾಗವಹಿಸುತ್ತಾರೋ ಅವರೆಲ್ಲರ ಮೇಲೆ ಒತ್ತಡ ಹೇರಲು ತಂಡವೊಂದು ಕಾರ್ಯ ನಿರ್ವಹಿಸಿತು. ಕಾಗದ ಕಾರ್ಖಾನೆ ಮುಚ್ಚಲಾಗುತ್ತದೆ ಎನ್ನುವ ಸುಳ್ಳು ಭೀತಿಯ ವಾತಾವರಣ ಸೃಷ್ಟಿಸಿದರು. ಬೆದರಿಸಿದರು. ಪ್ರತಿಭಟನೆ ನಡೆಯಲೇಬಾರದು. ಮಾಧ್ಯಮಗಳಲ್ಲಿ ಸುದ್ದಿ ಬಾರದಂತೆ ನೋಡಿಕೊಳ್ಳುವ ಕಾಂಟ್ರ್ಯಾಕ್ಟ ಕೂಡ ಪ್ರತಿಷ್ಠಿತ ಜ್ಯೂನಿಯರ್ ಕಾಲೇಜಿನ ಉಪನ್ಯಾಸಕನೊಬ್ಬ ಪಡೆದಿದ್ದ. ನಿಜವಾದ ಕಳ್ಳನ ಕೈಯಲ್ಲೇ ಕಾರ್ಖಾನೆಯ ಆಡಳಿತ ಮಂಡಳಿ ಚಾವಿ ಕೊಟ್ಟಿದ್ದರು. ಇದೇ ಅವರಿಗೆ ಮುಳುವಾಯಿತು. ಆದರೆ ಪೋಲಿಸ್ ಇಲಾಖೆ ಮಾತ್ರ ದಾಂಡೇಲಿಯಲ್ಲಿ ಪ್ರಜಾಪ್ರಭುತ್ವವಿದೆ. ಭೀತಿ ಸೃಷ್ಟಿಸಿದವರಿಗೆ ತಾವು ಮಾರಿಕೊಂಡಿಲ್ಲ. ಒಬ್ಬ ಪಾಂಡುರಂಗ ಹೆಗಡೆ ಬಂದು ನಿಂತು ಪ್ರತಿಭಟನೆ ಮಾಡಿದರೂ ಅವರಿಗೆ ರಕ್ಷಣೆ ನೀಡುವುದು ತಮ್ಮ ಕರ್ತವ್ಯ ಎನ್ನುವುದು ಏಪ್ರಿಲ್ 3 ರಂದು ತೋರಿಸಿ ಪ್ರತಿಭಟನಾಕಾರರನ್ನು ಮರಳಿ ಮನೆಗೆ ತಲುಪಿಸುವವರಗೆ ಕಾರ್ಯ ನಿರ್ವಹಿಸಿದ್ದು ಸ್ಥಳೀಯ ಡಿ.ವೈ. ಎಸ್. ಪಿ. ಯವರ ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ. ಬಹುಶಃ ಈ ಘಟನೆಯಿಂದ ತಾವಿದ್ದಲ್ಲಿಗೆ ಎಲ್ಲರನ್ನು ಕರೆಸಿಕೊಳ್ಳುತ್ತೇವೆ. ದಾಂಡೇಲಿ ನಿಂತಿರುವುದೇ ನಮ್ಮಿಂದ. ನಾವೇ ಸರ್ವಾಧಿಕಾರಿ ಎಂದು ಬೀಗುತ್ತಿರುವವರಿಗೆ ಸರಿಯಾದ ಪಾಠವಾಗಿದೆ. ಪೋಲಿಸ್ ಅಧಿಕಾರಿಗಳೆಂದರೆ ತಮ್ಮ ಮುಂದೆ ಹಲ್ಲು ಗಿಂಜುತ್ತಾ ಬಂದು ಹೇಳಿದ್ದು ಕೇಳಿ ಏನು ಬೇಕಾದರೂ ಮಾಡುತ್ತಾರೆಂದು ತಿಳಿದಿದ್ದ ಅವರಿಗೆ 'ಶಾಕ್' ಟ್ರೀಟಮೆಂಟ್ ಡಿ.ವೈ. ಎಸ್.ಪಿ. ಬಿ.ಎ. ನಾಯ್ಕ ನೀಡಿದ್ದು, ಅವರ ಹುದ್ದೆಯ ಹಾಗೂ ಖುರ್ಚಿಯ ಘನತೆಯನ್ನು ಎತ್ತಿ ಹಿಡಿದು ಅವರ ಕಚೇರಿಗೆ ಎಡತಾಕುವಂತಾಗಿದ್ದು ಹೊಸ ಅಧ್ಯಾಯಗಳಲ್ಲೊಂದು. ಮುಖಸ್ತುತಿಯಲ್ಲ ಇದು, ವಾಸ್ತವ.

ಏಪ್ರಿಲ್ 3 ರಂದು ಪಾಂಡುರಂಗ ಹೆಗಡೆಯವರೊಟ್ಟಿಗೆ ಪ್ರತಿಭಟನೆಯ ಎಲ್ಲ ಹಂತಗಳಲ್ಲೂ ಒಟ್ಟಿಗಿದ್ದೇನೆ. ಆದರೆ ಮಾರಿಕೊಂಡವರು ಮಾತ್ರ ಪಾಂಡುರಂಗ ಹೆಗಡೆಯವರೊಟ್ಟಿಗೆ ನಿಂತರೆ ಮಹಾಅಪರಾಧ ಎಂಬಂತೆ ಭಾವಿಸುತ್ತಿದ್ದರು. ಸಹಾಯಕ ಕಮಿಷನರ್ ಎ. ಜೆ. ಧುಮಾಳೆ ಹಾಗೂ ತಹಶೀಲ್ದಾರ್ ಜಿ. ಎಸ್. ಭಟ್ಟ ಅವರೊಟ್ಟಿಗೆ ಮಲೀನತೆಯ ದುಷ್ಪರಿಣಾಮದ ವೀಕ್ಷಣೆ ಮಾಡುವಾಗ ಒಂದಿಬ್ಬರು ಮಾಧ್ಯಮದವರು ಕಂಪನಿಯನ್ನು ತೃಪ್ತಿಪಡಿಸಲು ಹೋಗಿ ಪಾಂಡುರಂಗ ಹೆಗಡೆಯವರಿಂದ ಮುಖಕ್ಕೆ ಮಂಗಳಾರತಿ ಮಾಡಿಕೊಂಡರು. ಮನವಿ ಅರ್ಪಿಸಿದ ಪಾಂಡುರಂಗ ಹೆಗಡೆ ಮನವಿಯ ಪ್ರತಿಯನ್ನು ಕೂಡ ಮಾರಿಕೊಂಡವರಿಗೆ ಕೊಡಲು ನಿರಾಕರಿಸಿದ್ದು, ಇವರ ಯೋಗ್ಯತೆಗೆ ಸಾಕ್ಷಿಯಾಗಿದೆ. ಕಂಪನಿಗೆ ಹೆದರಿ ಬದುಕುವ ಇವರು ಸಾಮಾಜಿಕ ನ್ಯಾಯ ಹಳ್ಳಿಗಾಡಿನ ಜನರಿಗೆ ನೀಡಬಲ್ಲರೇ? ನೀವೇ ವಿಚಾರ ಮಾಡಿ.

ಎಲ್ಲದಕ್ಕೂ ಸುಲಭ ಪರಿಹಾರವಿದ್ದರೂ ಸಮಸ್ಯೆಯನ್ನು ಬೃಹದಾಕಾರವಾಗಿ ಬೆಳೆಸಿದ್ದು ಯಾರು ಗೊತ್ತೇ? ನಗರದ ಪ್ರತಿಷ್ಠಿತ ಪದವಿ ಪೂರ್ವ(ಜ್ಯೂನಿಯರ್) ಕಾಲೇಜೊಂದರ ಉಪನ್ಯಾಸಕ. ಈತ ಹಲವಾರು ಎಡಬಿಡಂಗಿ ವೇಶವನ್ನು ಧರಿಸಿದ್ದಾನೆ. ಇದೀಗ ಮಾಧ್ಯಮದ ಹೆಸರಿನಲ್ಲಿ ಕೊಳ್ಳೆಗೆ ಸಿದ್ದನಾಗಿದ್ದಾನೆ. ಹಿಂದೆ ಸಾಕ್ಷರತಾ ಆಂದೋಲನದಲ್ಲಿ ಸಾಕ್ಷರತಾ ಉಸಿರು ಘೋಷಣೆಯನ್ನು ಬಸಿರನ್ನಾಗಿ ಪರಿವರ್ತಿಸಿದ ಕೀರ್ತಿ ಈತನದು. ಈತನ ಉಪಧ್ಯಾಪಿ ಕೆಲಸಗಳು ಒಂದಲ್ಲ, ಎರಡಲ್ಲ .ಡಜನಗಟ್ಟಲೆ, ವಾರಗಟ್ಟಲೆ ಧಾರವಾಹಿಯಾಗಿ ಹಲವು ಕಂತುಗಳಲ್ಲಿ ನೀಡಬಹುದು. ಕಾರ್ಖಾನೆಗೂ ಹಾಗೂ ಕಾಳಿ ಬಚಾವೋ ಆಂದೋಲನದ ಹಿನ್ನಡೆಗೆ ಮೂಲ ಕಾರಣನಾದ ಈತ ನಂತರದ ದಿನಗಳಲ್ಲಿ ಮಾಡುತ್ತಿರುವುದು ಏನು ಗೊತ್ತೇ? ಪತ್ರಿಕೆ-ಪತ್ರಿಕೆಗಳ ನಡುವೆ ಸಮರ ಹುಟ್ಟಿಸಿ ಗುಟ್ಟು ರಟ್ಟಾಗಬಾರದೆಂದು ತನ್ನ ಉಳುವಿಗೆ ಪ್ರಯತ್ನಿಸಿದ್ದಾನೆ. ಪತ್ರಿಕೆಗಳು ಪರಸ್ಪರ ಕಚ್ಚಾಟದಲ್ಲಿ ತೊಡಗಿದರೆ ನಷ್ಟ ಮಾತ್ರ ಪತ್ರಿಕೆಗೆ. ಓದುಗರು ಕಚ್ಚಾಟದಲ್ಲಿ ತೊಡಗಿದ ಎರಡು ಪತ್ರಿಕೆಯನ್ನು ತಿರಸ್ಕರಿಸುವ ಸಾಧ್ಯತೆಯೇ ಹೆಚ್ಚು. ಸಂಪಾದಕರಾದ ನಾವು ಆದನ್ನು ಅರ್ಥೈಸಿ ಉದಾಸೀನವೇ ಮದ್ದು ಎನ್ನುವುದು ಒಳಿತಲ್ಲವೇ?

ಆದರೆ ಈ ಉಪನ್ಯಾಸಕ ಈ ಸಮಾಜಕ್ಕೆ ಎಷ್ಟೊಂದು ಘಾತಕ ಎನ್ನುವುದಕ್ಕೆ ಮತ್ತೊಂದು ಉದಾಹರಣೆ ಈ ಕೆಳಗೆ ನೀಡಿ ಮುಂದಿನದನ್ನು ನಿಮಗೆ ಬಿಟ್ಟು ಇದೇ ರೀತಿ ಯಾರ್ಯಾರು ವಂಚನೆಗೊಳಗಾಗಿದ್ದಾರೋ ಅವರು ನಮ್ಮನ್ನು ಸಂಪರ್ಕಿಸಿದರೆ ನಿಮಗೆ ನ್ಯಾಯ ಒದಗಿಸಲು ಪತ್ರಿಕೆ ಪ್ರಯತ್ನಿಸುತ್ತದೆ ಎನ್ನುವ ಭರವಸೆ ನೀಡುತ್ತೇನೆ.

ಸಂಪಾದಕ

### ಪೋಲಿಸ್ ಉನ್ನತ ಅಧಿಕಾರಿಯ ಹೆಸರಿನಲ್ಲಿ ವಂಚನೆ ?

ರಾಜ್ಯದ ಪ್ರತಿಷ್ಠಿತ ಉನ್ನತ ಪೋಲಿಸ್ ಅಧಿಕಾರಿಯೊಬ್ಬರು ಜಿಲ್ಲೆಯಲ್ಲಿದ್ದಾಗ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ಪದವಿ ಪೂರ್ವ (ಜ್ಯೂನಿಯರ್) ಕಾಲೇಜಿನ ಉಪನ್ಯಾಸಕ ಮಾಡಿದ್ದೇನು ಗೊತ್ತೇ? ಜಿಲ್ಲೆಯಲ್ಲಿ ಪೋಲಿಸ್ ಹುದ್ದೆಯನ್ನು ಭರ್ತಿ ಮಾಡುವಾಗ ಕೆಲಸ ಗ್ಯಾರಂಟಿ ಎಂದು ಉನ್ನತ ಅಧಿಕಾರಿಯ ಹೆಸರು ಹೇಳಿ ಮುರ್ಕವಾಡದ ಮಹೇಶ ಕೃಷ್ಣಾ ಪ್ರಭು ಎಂಬುವರಿಂದ 50 ಸಾವಿರ ರೂಪಾಯಿ ಪಡೆದನಂತೆ. ಆದರೆ ಪ್ರಕಟಿತ ಯಾದಿಯಲ್ಲಿ ಹೆಸರು ಬರಲಿಲ್ಲ. ನಂತರ ಎರಡನೇ ಯಾದಿಯಲ್ಲಿ ಹೆಸರು ಬರುತ್ತದೆ ಎಂದು ಕಾಲ ನೂಕಿದ. ಅಧಿಕಾರಿ ವರ್ಗಾವಣೆಗೊಂಡರು. ಕೆಲಸ ಸಿಗದೇ ಕೊಟ್ಟ ಹಣ ಕೇಳಲು ಬಂದಾಗ ಅಧಿಕಾರಿಗೆ ಫೋನಾಯಿಸುವ ಶೈಲಿಯಲ್ಲಿ ಮಾತನಾಡಿದಂತೆ ಅಭಿನಯಿಸುತ್ತಾನಂತೆ. ಈವರೆಗೂ ಹಣ ದೊರೆತಿಲ್ಲ. ಹೀಗೆ ವಂಚಕರನ್ನು, ಕಳ್ಳರನ್ನು, ಖದೀಮರನ್ನು ಹಿಡಿಯುವ ಪೋಲಿಸ್ ಅಧಿಕಾರಿಗಳ ಹೆಸರಿನಲ್ಲಿ ವಂಚನೆ ಮಾಡಿರುವ ಈತ ಮಹಾ ವಂಚಕನಲ್ಲವೇ? ಕನಿಷ್ಠ ಹಣ ಕಳೆದುಕೊಂಡ ವ್ಯಕ್ತಿಗೆ ಹಣ ವಸೂಲಿ ಮಾಡಿ ಕೊಡುವ ಕೆಲಸ ಸ್ಥಳೀಯ ಪೋಲಿಸರು ಮಾಡಿ ತೋರಿಸಬೇಕಿದ್ದು, ಅಧಿಕಾರಿಗಳ ಹೆಸರಿನಲ್ಲಿ ಮಾಡುತ್ತಿರುವ ಇಂತಹ ಕೃತ್ಯಕ್ಕೆ ಕಡಿವಾಣ ಹಾಕಬೇಕಿದೆ.

# ಆಶ್ರಯ ಯೋಜನೆ ಫಲಾನುಭವಿಗಳಿಂದ ಧರಣಿ

ದಾಂಡೇಲಿ: ದಲಿತ ಮತ್ತು ಅತಿ ಹಿಂದುಳಿದ ಜನಾಂಗಕ್ಕೆ ಸೇರಿದ 500 ಕ್ಕೂ ಹೆಚ್ಚು ದಾಂಡೇಲಿ ನಗರ ವ್ಯಾಪ್ತಿಯ ಆಶ್ರಯ ಯೋಜನೆಯ ಫಲಾನುಭವಿಗಳು ಇತ್ತೀಚೆಗೆ ನಗರಸಭೆಯ ಎದುರು ತಮ್ಮ ಬೇಡಿಕೆ ಈಡೇರಿಕೆಗಾಗಿ ಒಂದು ದಿನದ ಸಾಂಕೇತಿಕ ಧರಣಿ ನಡೆಸಿದರು.

ದಾಂಡೇಲಿ ನಗರದ ಗಾಂಧಿನಗರ, ಅಜಾದನಗರ, ಮಾರುತಿನಗರ, ಪಟೇಲನಗರ, ಬಾಂಬುಚಾಳ, ಹಳೇ ದಾಂಡೇಲಿ, ಹಳಿಯಾಳ ರಸ್ತೆ, ಕುಳಗಿ ರಸ್ತೆ, ರೇಲ್ವೆಗೇಟ್ ಮುಂತಾದ ಪ್ರದೇಶಗಳ ಆಶ್ರಯ ಯೋಜನೆ ಫಲಾನುಭವಿಗಳ ಈ ಧರಣಿಯಲ್ಲಿ ಪಾಲ್ಗೊಂಡಿದ್ದರು.

ದಾಂಡೇಲಿ ಬಡ ಜನತೆ ಈಗ ಎರಡು ಕಂಪನಿಗಳು ಮುಚ್ಚಿ ಅತಿ ಕಠಿಣ ಪರಿಸ್ಥಿತಿ ಎದುರಿಸುತ್ತಿರುವಾಗ 2-3 ವರ್ಷಗಳಿಂದ ವಸೂಲಿ ಮಾಡದ ಸಾಲದ ಕಂತಿನ ಬಾಕಿಯನ್ನು ಒಟ್ಟು ಸೇರಿಸಿ ವಾರದೊಳಗೆ ವಸೂಲಾತಿಗಾಗಿ ನೋಟಿಸ್ ನೀಡಿ ಬಾಕಿ ಕಟ್ಟದಿದ್ದರೆ ಮನೆ ಜಪ್ತಿ ಮಾಡುವುದಾಗಿ ನಗರಸಭೆ ಆದೇಶಿಸಿರುವುದನ್ನು ಖಂಡಿಸಿ ಧರಣಿ ನಡೆಸಲಾಯಿತು.

ಆಶ್ರಯ ಯೋಜನೆ ಸಾಲ ನೀಡುವಾಗ ಸಬ್ಸಿಡಿ ನೀಡುತ್ತೇವೆ, ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಲಾಗಿತ್ತು. ಆದರೆ ಈಗ ಏಕಾಏಕಿ ನೋಟಿಸ್ ನೀಡಿ ಹಣ ವಸೂಲಿಗಾಗಿ ಕಠಿಣ ಕ್ರಮದ ಬೆದರಿಕೆ ಒಡ್ಡಲಾಗಿದೆ. ಇದರಿಂದ ಸಿಟ್ಟಿಗೆದ್ದ ಫಲಾನುಭವಿಗಳು ಸಭೆ ಸೇರಿ ಕಾರ್ಮಿಕ ಮುಖಂಡ ಎಚ್.ಬಿ. ನಾಯಕ ಸಂಚಾಲಕತ್ವದಲ್ಲಿ ಸಂಘಟಿತರಾಗಿ ಧರಣಿ ನಡೆಸಿದರು. ಧರಣಿಯನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಂಚಾಲಕ ಶಾಂತಾರಾಮ ನಾಯಕ ಯಾವುದೇ ಕಾರಣಕ್ಕೂ ಬಡಜನತೆಯ ಮನೆ ಜಪ್ತಿಗೆ ನಗರಸಭೆ ಮುಂದಾದರೆ ಜನರ ತೀವ್ರ ಪ್ರತಿಭಟನೆ ಎದುರಿಸಬೇಕಾಗುತ್ತದೆ. ಬಡವರ ತಲೆಗೊಂದು ಸೂರು ನೀಡುವುದಾಗಿ ಸರ್ಕಾರ, ಮಂತ್ರಿಗಳು ಆಶ್ವಾಸನೆ ನೀಡುತ್ತಿದ್ದಾರೆ. ಆದರೆ ಆ ಸೂರನ್ನೇ ತೆಗೆಯಲು ದಾಂಡೇಲಿ ನಗರಸಭೆ ಮುಂದಾಗಿದೆ. ಇದನ್ನು ತೀವ್ರವಾಗಿ ಖಂಡಿಸುವುದಾಗಿ ತಿಳಿಸಿ, ಹಣ ನೀಡುವಲ್ಲಿ ನಡೆಯುತ್ತಿರುವ ತೀವ್ರ ಭ್ರಷ್ಟಾಚಾರವನ್ನು ಖಂಡಿಸಿದರು. ಕಾರ್ಮಿಕ ಮುಖಂಡ ಎಚ್.ಬಿ. ನಾಯಕ ಇವರು ಹೋರಾಟವನ್ನು ಬೆಂಬಲಿಸಿ ಮಾತನಾಡಿದರು. ನಗರಸಭೆ ಸದಸ್ಯ ಎಸ್. ಎ. ಸಾವಂತ ಹೋರಾಟವನ್ನು ಬೆಂಬಲಿಸುತ್ತಾ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಈ ವಿಷಯವನ್ನು ಎತ್ತುವುದಾಗಿ ತಿಳಿಸಿದರು. ಸಿಐಟಿಯು ಜಿಲ್ಲಾ ಅಧ್ಯಕ್ಷ ಹಾಗೂ ದಾಂಡೇಲಿ ನಗರಸಭೆಯ ಮಾಜಿ ಅಧ್ಯಕ್ಷರಾದ ಟಿ. ಎಸ್. ನಾಯ್ಕ ಮಾತನಾಡಿದರು.

ಆಯುಕ್ತರಿಗೆ ಸಲ್ಲಿಸಿದ ಮನವಿಯಲ್ಲಿರುವ ಮುಖ್ಯ ಬೇಡಿಕೆಗಳೆಂದರೆ ಮುಂಬರುವ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಆಶ್ರಯ ಯೋಜನೆಯ ಫಲಾನುಭವಿಗಳ ಮರುಪಾವತಿ ವಸೂಲಿಗೆ ಹೊರಡಿಸಿರುವ ಆದೇಶವನ್ನು ರದ್ದು ಮಾಡಬೇಕು. ಬಡ್ಡಿ ಮನ್ನಾ ಮಾಡಿ, ಸಬ್ಸಿಡಿ ನೀಡಿ ಸುಲಭ ಕಂತುಗಳಲ್ಲಿ ಸಾಲ ಮರುಪಾವತಿಗೆ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಲಾಗಿದೆ. ಚುನಾಯಿತ ಪ್ರತಿನಿಧಿಗಳು ಈ ನಿಟ್ಟಿನಲ್ಲಿ ಗಮನಹರಿಸಬೇಕೆಂದು ಒತ್ತಾಯಿಸಲಾಗಿದೆ. ಬೇಡಿಕೆ ಈಡೇರದಿದ್ದರೆ ಮುಂದೆ ಬೃಹತ್ ಹೋರಾಟ ಸಂಘಟಿಸಲು ತೀರ್ಮಾನಿಸಲಾಯಿತು.

## ಸಣ್ಣ ನೀರಾವರಿ ಇಲಾಖೆಯಿಂದ ಗುತ್ತಿಗೆದಾರರಿಗೆ ಹಣ ಪಾವತಿ

ಹಳಿಯಾಳ: ಸಣ್ಣ ನೀರಾವರಿ ಇಲಾಖೆಯ ಹಳಿಯಾಳ ವಿಭಾಗದಿಂದ ಉತ್ತರ ಕನ್ನಡ ಜಿಲ್ಲೆಯ ಸಿವಿಲ್ ಗುತ್ತಿಗೆದಾರರಿಗೆ ಸಂದಾಯವಾಗಬೇಕಾದ 3.39 ಕೋಟಿ ರೂ.ಗಳಲ್ಲಿ ಸಧ್ಯ 30 ಲಕ್ಷ ರೂ.ಗಳನ್ನು ನೂರು ಗುತ್ತಿಗೆದಾರರಿಗೆ ನೀಡಲಾಗಿದೆಯೆಂದು ಸಣ್ಣ ನೀರಾವರಿ ಇಲಾಖೆಯ ಮುಖ್ಯ ಇಂಜಿನೀಯರ ಎಸ್. ಕೆ. ಪುರೋಹಿತ ತಿಳಿಸಿದ್ದಾರೆ.

ಹಳಿಯಾಳ, ಕುಮಟಾ, ಹೊನ್ನಾವರ ಭಾಗದ 25 ಕ್ಕೂ ಹೆಚ್ಚು ಗುತ್ತಿಗೆದಾರರು ಬಾಕಿ ಹಣ ಪಾವತಿಸಲು ಒತ್ತಾಯಿಸಿ ಮುಖ್ಯ ಇಂಜಿನೀಯರ ಕಚೇರಿ ಎದುರು ಇತ್ತೀಚೆಗೆ ಧರಣಿ ನಡೆಸಿದ್ದರು.

ಇನ್ನೂಳಿದ ಹಣ ಸರ್ಕಾರದಿಂದ ಬಿಡುಗಡೆಯಾದೊಡನೆ ವಿತರಿಸಲಾಗುವುದೆಂದು ಮುಖ್ಯ ಇಂಜನೀಯರ ತಿಳಿಸಿದ್ದಾರೆ.


### ಚಂದಾವಿವರ

ವಾರ್ಷಿಕಚಂದಾ - 150 ರೂ.

ಅಜೀವ ಚಂದಾ - 2000 ರೂ.

### ಚಂದಾ ದಾರರ ಗಮನಕ್ಕೆ

ನಮ್ಮಲ್ಲಿ ಚಂದಾ ದಾರರಾಗಿ ರುವವರಿಗೆ ಪತ್ರಿಕೆ ಸರಿಯಾಗಿ ತಲುಪದೇ ಇದ್ದಲ್ಲಿ ತಕ್ಷಣ ಕಾಳಿ ನ್ಯೂಸ್ ಪತ್ರಿಕೆಯ ಕಾರ್ಯಾಲಯಕ್ಕೆ ದೂರವಾಣಿ ಮೂಲಕ ಸಂಪರ್ಕಿಸಿರಿ.

--- ಸಂ.

# ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ಜರುಗಿಸಲು ಸೂಚನೆ

ಯಲ್ಲಾಪುರ: ಬೇಸಿಗೆಯ ದಿನಗಳಲ್ಲಿ ತಾಲೂಕಿನ ಯಾವ ಭಾಗದಲ್ಲಿಯೂ ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾಲೂಕಿನ ಜಂಟಿ ಉಸ್ತುವಾರಿ ಅಧಿಕಾರಿಗಳಾದ ಗೋಪಾಲಕೃಷ್ಣ ಬೇಕಲ್ ಸೂಚಿಸಿದ್ದಾರೆ.

ಯಲ್ಲಾಪುರ ತಾ.ಪಂ. ಸಭಾಭವನದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ನೀರಿನ ಅಭಾವ ಯಾವುದೇ ಪ್ರದೇಶದಲ್ಲಿ ಕಂಡು ಬಂದರೂ ಕೂಡ ತಕ್ಷಣ ತಿಳಿಸುವ ವ್ಯವಸ್ಥೆ ಆಗಬೇಕು ಕುಡಿಯುವ ನೀರಿಗಾಗಿ ಪರದಾಡುವ ಸಂದರ್ಭ ಒದಗಿ ಬರಬಾರದು ಎಂದು ಹೇಳಿದರು.

ಸರ್ಕಾರದ ಎಲ್ಲ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳುವಂತೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳಿದರು.

ಅದರಂತೆ ಪ.ಪಂ.ನ್ನು ಒಳಗೊಂಡು ತಾಲೂಕಿನ ಎಲ್ಲ ಗ್ರಾ. ಪಂ.ಗಳಲ್ಲೂ ಕೂಡ ಕುಡಿಯುವ ನೀರಿನ ಸಮಸ್ಯೆಯಿರಲಿ ಅಥವಾ ಇನ್ನಾವುದೇ ಸಮಸ್ಯೆಗಳಿದ್ದರೂ ಕೂಡ ಸಾರ್ವಜನಿಕರಿಗೆ ತಿಳಿಸಲು ಅನುಕೂಲವಾಗುವಂತೆ ರಜಿಸ್ಟರ್ ಒಂದನ್ನು ಪ್ರತಿ ಗ್ರಾ. ಪಂ. ದಲ್ಲೂ ಇಡಬೇಕೆಂದು ಬೇಕಲ್ ಸೂಚಿಸಿದರು.

ನುಶಿ ಪೀಡೆಯಿಂದಾಗುವ ಅನಾಹುತ ಹಾಗೂ ಅದನ್ನು ತಡೆಗಟ್ಟುವ ಮಾರ್ಗೋಪಾಯದ ಕುರಿತು ಏಪ್ರಿಲ್, ಮೇ ತಿಂಗಳಲ್ಲಿ ಕಳಚೆ ಹಾಗೂ ಕೊಡ್ಲಗದ್ದೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತೋಟಗಾರಿಕಾ ಅಧಿಕಾರಿಗಳು ಸಭೆಗೆ ತಿಳಿಸಿದರು.

ಯಲ್ಲಾಪುರ ಪ್ರವಾಸೋದ್ಯಮ ದೃಷ್ಟಿಯಿಂದ ಅತಿ ಮಹತ್ವದ ಸ್ಥಾನವನ್ನು ಪಡೆಯುತ್ತಿದ್ದು, ಪಟ್ಟಣದ ಪ್ರದೇಶಗಳಲ್ಲಿ ಎಲ್ಲ ಇಲಾಖೆಗಳ ಸಹಕಾರಿ ಪಡೆದು ಬರುವ ದಿನಗಳಲ್ಲಿ ಮೇ ಫ್ಲವರ್ ಗಿಡಗಳನ್ನು ನೆಡಬೇಕೆಂಬ ಸೂಚನೆಯನ್ನು ಬೇಕಲ್ ನೀಡಿದರು.

ತಾಲೂಕಿನ ಆರೋಗ್ಯ ಇಲಾಖೆಯಲ್ಲಿ ನಾಲ್ಕು ಡಾಕ್ಟರ್‌ಗಳ ಕೊರತೆಯಿರುವುದಾಗಿ ಆರೋಗ್ಯಾಧಿಕಾರಿಗಳ ಸಭೆಗೆ ತಿಳಿಸಿ ಏ. 23 ರಂದು ಕುಟುಂಬ ಯೋಜನೆಯ ಕ್ಯಾಂಪ್ ನಡೆಸಲಾಗುವುದು ಎಂದು ತಿಳಿಸಿದರು.

ಏ.7 ರಿಂದ ಚಿಣ್ಣರ ಅಂಗಳವನ್ನು ತಾಲೂಕಿನ ನಾಲ್ಕು ವಿಭಾಗಗಳಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸಿದ ಶಿಕ್ಷಾ ಅಭಿಯಾನದಲ್ಲಿ ಶೌಚಾಲಯ ನಿರ್ಮಿಸಲು ತಲಾ 25 ಸಾವಿರದಂತೆ ಹಾಗೂ ಕುಡಿಯುವ ನೀರಿಗಾಗಿ ತಲಾ 10 ಸಾವಿರದಂತೆ 20 ಶಾಲೆಗಳಿಗೆ ನೀಡಿರುವುದಾಗಿ ಸಭೆಗೆ ತಿಳಿಸಿದರು.

ತಾ.ಪಂ. ಅಧ್ಯಕ್ಷ ಅಶೋಕ ತಿನ್ನೇಕರ ಅಧ್ಯಕ್ಷತೆ ವಹಿಸಿದ್ದರು. ಜಿ. ಪಂ. ಸದಸ್ಯ ವಿಜಯ ಮಿರಾಶಿ, ಪ.ಪಂ. ಅಧ್ಯಕ್ಷತೆ ಹರೂನ ಶೇಖ್ ಹಾಗೂ ಪಂಚಾಯತ ಅಧ್ಯಕ್ಷರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ರೇಲ್ವೆ ಸಮರ್ಪಕ ವ್ಯವಸ್ಥೆ ಕಲ್ಪಿಸಲು ಆಗ್ರಹಿಸಿ ಅಸ್ನೋಟಿಯಲ್ಲಿ ರೈಲು ತಡೆ

ಕಾರವಾರ: ಎಕ್ಸಪ್ರೆಸ್ ರೈಲುಗಳ ನಿಲುಗಡೆ, ರೈಲು ನಿಲ್ದಾಣಕ್ಕೆ ರಸ್ತೆ ಸಂಪರ್ಕದ ಸಮರ್ಪಕ ವ್ಯವಸ್ಥೆ, ನಿಲ್ದಾಣಕ್ಕೆ ಬಸ್‌ಗಳ ವ್ಯವಸ್ಥೆ ಒಳಗೊಂಡಂತೆ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇತ್ತೀಚೆಗೆ ಅಸ್ನೋಟಿ ರೈಲು ನಿಲ್ದಾಣದಲ್ಲಿ ನೂರಾರು ಜನರು ರೈಲು ತಡೆ ನಡೆಸಿ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಾರ್ವಜನಿಕರು ಮತ್ತು ರೇಲ್ವೆ ಪೋಲಿಸ್ ಪಡೆಯ ಸಿಬ್ಬಂದಿಗಳ ನಡುವೆ ಪರಸ್ಪರ ಮಾತಿನ ಚಕಮಕಿ ನಡೆಯಿತು. ಇದರಲ್ಲಿ ಮಹಿಳೆಯರು ಸೇರಿಕೊಂಡರು. ಈ ಸಂದರ್ಭದಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ರೇಲ್ವೆ ಪೋಲಿಸ್‌ರಿಂದ ಮಹಿಳೆಯರ ಮೇಲೆ ಸೌಮ್ಯ ಲಾಠಿ ಪ್ರಹಾರ ನಡೆದ ಬೆಳವಣಿಗೆಯು ಕಂಡಿತು.

ಸದಾಶಿವಗಡದ ಜನ ಜಾಗೃತಿ ವಿಕಾಸ ವೇದಿಕೆಯ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಅಸ್ನೋಟಿ, ಮಾಜಾಳಿ, ಮುಡಗೇರಿ, ಸದಾಶಿವಗಡದ ಸುಮಾರು ನಾಲ್ಕುನೂರರಷ್ಟು ಜನರು ಮಹಿಳೆಯರು ಮುಂಜಾನೆ ಅಸ್ನೋಟಿ ರೈಲು ನಿಲ್ದಾಣದಲ್ಲಿ ಜಮಾಯಿಸಿ ಮುಂಜಾನೆ 9 ಗಂಟೆಗೆ ಜುಕ್ಕಾ- ಏರ್ನಾಕುಲಂ (ಗುಜರಾತ-ಕೇರಳ) ಎಕ್ಸಪ್ರೆಸ್ ರೈಲನ್ನು ಸುಮಾರು 1 ಗಂಟೆಗಳ ಕಾಲ ತಡೆದು ನಿಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರು ಅಸ್ನೋಟಿ ರೈಲು ನಿಲ್ದಾಣದಲ್ಲಿ ಎಲ್ಲ ಎಕ್ಸಪ್ರೆಸ್ ರೈಲುಗಳು ನಿಂತು ಸಾಗಬೇಕು. ಅಸ್ನೋಟಿ ರೈಲು ನಿಲ್ದಾಣಕ್ಕೆ ಸಮರ್ಪಕವಾದ ಬಸ್ ಸೌಕರ್ಯ ಕಲ್ಪಿಸಬೇಕು. ಮುಂಬೈದಿಂದ ಮಡಗಾಂವವರೆಗೆ ಬರುವಂತಹ ಎಲ್ಲ ರೈಲುಗಳ ಸಂಚಾರವನ್ನು ಅಸ್ನೋಟಿಯವರೆಗೆ ವಿಸ್ತರಿಸಬೇಕು.

ಅಸ್ನೋಟಿಗೆ ಸಮೀಪದಲ್ಲಿರುವ ಮುಡಗೇರಿಯ ರೈಲು ನಿಲ್ದಾಣದಲ್ಲಿ ಕೆಲವು ರೈಲುಗಳ ನಿಲುಗಡೆಗೆ ಅವಕಾಶ ಮಾಡಿಕೊಡಬೇಕು, ರೈಲು ನಿಲ್ದಾಣಕ್ಕೆ ಸರಿಯಾದ ರಸ್ತೆಯನ್ನು ನಿರ್ಮಿಸಿಕೊಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ವೇದಿಕೆ ಪದಾಧಿಕಾರಿಗಳು ಮತ್ತು ಸಾರ್ವಜನಿಕರು ಮುಂದಿಟ್ಟರು.

ಮಹಿಳೆಯರು ಕೂಡ ರೈಲು ರೋಖೋಗೆ ಬೆಂಬಲಿಸಿ ಏರಿದ ಧ್ವನಿಯಲ್ಲಿ ಮಾತಿಗೆ ಇಳಿದಾಗ ಗೊಂದಲಮಯ ವಾತಾವರಣ ಸೃಷ್ಟಿಯಾಗಿ ರೇಲ್ವೆ ಪೋಲಿಸರು ಪರಿಸ್ಥಿತಿ ನಿಯಂತ್ರಣಕ್ಕಾಗಿ ಸೌಮ್ಯ ಲಾಠಿ ಪ್ರಹಾರ ನಡೆಸಿದರು.

ರೈಲ್ ರೋಖೋ ನಡೆಸುತ್ತಿದ್ದಂತೆ ಕೊಂಕಣ ರೇಲ್ವೆ ಸೀನಿಯರ್ ಟ್ರಾಫಿಕ್ ಮ್ಯಾನೇಜರ್ ಹಾಗೂ ಏರಿಯಾ ಸುಪರ್‌ವೈಸರ್‌ಗಳು ಸ್ಥಳಕ್ಕೆ ಧಾವಿಸಿ ಮನವಿಯನ್ನು ಸ್ವೀಕರಿಸಿದರು.

ದೀಪಕ ದೇಸಾಯಿ, ಗಂಗಾಧರ ಭಟ್ಟ, ಪ್ರೇಮಾನಂದ ಗಡಗರ, ಪ್ರೇಮಾನಂದ ದೇಸಾಯಿ, ಎನ್. ಎ.ಶೇಖ ಮುಂತಾದವರು ರೈಲ್ ರೋಖೋ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

# ಜಾನುವಾರುಗಳ ಕಾಯಿಲೆಗೆ ಪಶು ವೈದ್ಯಕೀಯ ಇಲಾಖೆ ಸ್ಪಂದಿಸುತ್ತಿಲ್ಲ: ರೈತರ ಆರೋಪ

ಜೋಯಡಾ: ಜೋಯಡಾ ತಾಲೂಕಿನಾದ್ಯಂತ ಕಳೆದ ಕೆಲ ದಿನಗಳಿಂದ ಜಾನುವಾರುಗಳು ವಿಚಿತ್ರ ಕಾಯಿಲೆಗೆ ಒಳಗಾಗಿ ಬಲಿಯಾಗುತ್ತಿದ್ದು, ಈ ಕುರಿತು ಪಶು ವೈದ್ಯಕೀಯ ಇಲಾಖೆ ಸೂಕ್ತ ಲಕ್ಷ್ಯ ವಹಿಸುತ್ತಿಲ್ಲವೆಂದು ಆಪಾದಿಸಿರುವ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜೋಯಡಾ ತಾಲೂಕಿನ ಜೋಯಡಾ, ಸೋಲಾವಳಿ, ಬಾಂಜೇಲಿ, ಖಾನಗಾಂವ ಮತ್ತಿತರ ಗ್ರಾಮಗಳಲ್ಲಿ ಕಳೆದ 7-8 ದಿನಗಳಿಂದ ಈ ಕಾಯಿಲೆ ವ್ಯಾಪಿಸಿಕೊಳ್ಳುತ್ತಿದ್ದು, ದಿನಂಪ್ರತಿ ಒಂದೆರಡು ದನಕರುಗಳು ಬಲಿಯಾಗುತ್ತಿವೆ ಎಂದು ರೈತ ವಲಯದ ವರದಿಯಿಂದ ತಿಳಿದಿದೆ.

ರೋಗ ಪೀಡಿತವಾದ ಆಕಳುಗಳ ಗಂಟಲ ಭಾಗದಲ್ಲಿ ಊದಿಕೊಂಡು, ಬಾಯಿಯಿಂದ ನೊರೆ ಬಂದು ಸಾವನ್ನಪ್ಪುತ್ತಿವೆ. ಈ ರೋಗಕ್ಕೆ ಕಾರಣ ಹಾಗೂ ಪರಿಹಾರ ತಿಳಿಯದ ರೈತರು ಕಂಗೆಟ್ಟಿದ್ದಾರೆ. ಜೋಯಡಾ ತಾಲೂಕಿನ ಪಶು ವೈದ್ಯಾಧಿಕಾರಿ ಎಂ.ಬಿ. ವಿಜಯಕುಮಾರ ತಾ. ಪಂ. ಗೆ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕಗೊಂಡಾದ ನಂತರ ಜೋಯಡಾದ ಪಶು ಆಸ್ಪತ್ರೆ ಅವ್ಯವಸ್ಥೆಗಳ ಆಗರವಾಗಿದೆ ಎಂಬ ದೂರು ಕೇಳಿ ಬರುತ್ತಿದೆ.

ಪ್ರತಿಭಟನೆ: ಜಾನುವಾರುಗಳಿಗೆ ಬರುತ್ತಿರುವ ಈ ಕಾಯಿಲೆ ನಿಯಂತ್ರಣದ ಕುರಿತು ಮಾಹಿತಿ ಪಡೆಯಲು ಕೆಲ ಗ್ರಾಮಸ್ಥರು ಏ.5 ಪಶು ವೈದ್ಯಾಧಿಕಾರಿ ಕಾರ್ಯಾಲಯಕ್ಕೆ ಹೋದಾಗ ಅಲ್ಲಿ ಯಾರೂ ಸಿಬ್ಬಂದಿಗಳಿಲ್ಲದ ಕಾರಣ ಜನರ ಆಕ್ರೋಶ ಸ್ಫೋಟಗೊಂಡು ಆಸ್ಪತ್ರೆಯ ಬಾಗಿಲಿಗೆ ಧಕ್ಕೆ ಉಂಟು ಮಾಡಿದ ಬೆಳವಣಿಗೆ ಸಹ ಕಂಡಿತು. ಈ ಸಂದರ್ಭದಲ್ಲಿ ಆಗಮಿಸಿದ ತಹಶೀಲ್ದಾರ ಪಿ.ವಿ. ಚಿಪ್ಕರ ಪರಿಸ್ಥಿತಿ ತಿಳಿಗೊಳಿಸಿದರಲ್ಲದೇ, ತತ್‌ಕ್ಷಣ ಸಮಸ್ಯೆಗೆ ಪರಿಹಾರ ಕಂಡು ಹಿಡಿದು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಶು ವೈದ್ಯಾಧಿಕಾರಿಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸೂಚನೆ ನೀಡಿದರು.

ಪಶು ವೈದ್ಯಕೀಯ ಇಲಾಖೆ ಇನ್ನಾದರೂ ಎಚ್ಚೆತ್ತುಕೊಂಡು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ರೈತರು ಎಚ್ಚರಿಕೆ ನೀಡಿದ್ದಾರೆ.

# ಪಂಚಗಾನ ಭವನ ಉದ್ಘಾಟನೆ ಏ.12 ರಂದು

ದಾಂಡೇಲಿ: ಲಿಂಗೈಕ್ಯ ಗಾನಯೋಗಿ ಪಂ. ಪಂಚಾಕ್ಷರ ಗವಾಯಿಗಳವರ ಶತಮಾನೋತ್ಸವ ಸ್ಮರಣಾರ್ಥವಾಗಿ ದಾಂಡೇಲಿಯ ಶ್ರೀ ದುರ್ಗಾದೇವಿ ಮಂದಿರದ ಹತ್ತಿರ ನಿರ್ಮಿಸಿದ ಪಂಚಗಾನ ಭವನದ ಉದ್ಘಾಟನಾ ಸಮಾರಂಭ ಏ.12 ರಂದು ಸಂಜೆ 5 ಗಂಟೆಗೆ ನಡೆಯಲಿದೆ.

ಗದಗದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಗಾನಯೋಗಿ ಡಾ. ಪಂ. ಪುಟ್ಟರಾಜ ಗವಾಯಿಗಳವರ ಸಾನಿಧ್ಯದಲ್ಲಿ ರಾಜ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ ಉದ್ಘಾಟನೆ ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ರಾಜ್ಯ ಜಲ ಸಂಪನ್ಮೂಲ ಸಚಿವ ಎಚ್. ಕೆ. ಪಾಟೀಲ, ಗೌರವಾನ್ವಿತ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಎ. ಡಿ. ಹೆಗಡೆ, ಜಿಲ್ಲಾಧಿಕಾರಿ ರಾಕೇಶ ಸಿಂಗ್, ದಾಂಡೇಲಿ ನಗರಸಭೆ ಅಧ್ಯಕ್ಷ ಧಿರೇಂದ್ರ ಛಬ್ಬಿ ಅವರುಗಳು ಪಾಲ್ಗೊಳ್ಳುವರು.

ದಾಂಡೇಲಿ ವೆಸ್ಟ ಕೋಸ್ಟ ಕಾಗದ ಕಾರ್ಖಾನೆಯ ಕಾರ್ಯನಿರ್ವಾಹಕ ನಿರ್ದೇಶಕ ಕೆ. ಎಲ್. ಚಂಡಕ ಅಧ್ಯಕ್ಷತೆ ವಹಿಸುವರು.

ಉದ್ಘಾಟನಾ ಸಮಾರಂಭದ ನಂತರ ಡಾ. ಪಂ. ಪುಟ್ಟರಾಜ ಗವಾಯಿಗಳವರ ತುಲಾಭಾರ ಹಾಗೂ ಶ್ರೀ ವೀರೇಶ್ವರ ಪುಣ್ಯಾಶ್ರಮದ ಸಂಗೀತ ವಿದ್ವಾಂಸರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ದಾಂಡೇಲಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಎ. ಜಿ. ಸಭಾಹಿತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೀನುಗಾರರ ಸಂಕಷ್ಟಕ್ಕೆ ಸ್ಪಂದಿಸಲು ಯುವಕರಿಗೆ ಕರೆ

ಕಾರವಾರ: ಮತ್ಸ್ಯಕ್ಷಾಮದಿಂದಾಗಿ ಇಂದು ಮೀನುಗಾರರ ಬದುಕು ದುಸ್ತರವಾಗಿದೆ. ಆದರೆ ಮೀನುಕ್ಷಾಮ ಇದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ವರದಿ ಕೊಡುತ್ತಿಲ್ಲ. ಹೀಗಾಗಿ ಈ ಸಂಕಷ್ಟದ ಪರಿಸ್ಥಿತಿಯಲ್ಲಿಯೂ ಸರ್ಕಾರ ಮೀನುಗಾರರ ಸಹಾಯಕ್ಕೆ ಬರುತ್ತಿಲ್ಲ. ಇಂಥ ಸಂದರ್ಭದಲ್ಲಿ ನಮ್ಮ ಮೀನುಗಾರರ ಮುಖಂಡರು ಒಂದಾಗಿ ಹೋರಾಡಬೇಕಾದ ಅವಶ್ಯಕತೆ ಇದೆ ಎಂದು ಜಿಲ್ಲಾ ಪಂಚಾಯತ ಉಪಾಧ್ಯಕ್ಷ ರಾಮಾ ಮೊಗೇರ ಹೇಳಿದರು.

ಇಲ್ಲಿಯ ಕೋಡಿಬೀರ ರಂಗಮಂದಿರದಲ್ಲಿ ಶ್ರೀ ಕೋಡಿಬೀರ ಯುವಕ ಮಂಡಳವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಇಂದು ಎಲ್ಲ ರೀತಿಯ ಮೀನುಗಾರರು ಕಷ್ಟದಲ್ಲಿದ್ದಾರೆ. ಸಮಾಜಕ್ಕೊದಗಿರುವ ಈ ಸಂಕಷ್ಟದಿಂದ ಪಾರಾಗಲು ಯುವಕರು ಮುಂದಾಗಿ ಶ್ರಮಿಸಬೇಕು. ಮೀನುಗಾರರು ಎಲ್ಲಿಯವರೆಗೆ ಸಂಘಟಿತರಾಗುವುದಿಲ್ಲವೋ ಅಲ್ಲಿಯವರೆಗೆ ಏಳಿಗೆ ಸಾಧ್ಯವಿಲ್ಲ. ಇಂದು ಮೀನುಗಾರ ಸಮಾಜದಲ್ಲಿ ಅನೇಕ ಮುಖಂಡರಿದ್ದಾರೆ. ಆದರೆ ಒಬ್ಬರು ಇನ್ನೊಬ್ಬರ ಮುಖ ನೋಡದ ಪರಿಸ್ಥಿತಿ ಇದೆ. ಇದು ಹೋಗಬೇಕು. ಸಮಸ್ಯೆ ಪರಿಹಾರಕ್ಕಾಗಿ ಎಲ್ಲ ಮುಖಂಡರು ಒಂದಾಗಿ ನಮ್ಮ ಕೂಗು ವಿಧಾನಸೌಧದೊಳಗೆ ಮೊಳಗುವಂತೆ ಮಾಡಿ ಪರಿಹಾರ ಸಿಗುವವರೆಗೆ ಹೋರಾಡಬೇಕಾಗಿದೆ ಎಂದರು.

ಅತಿಥಿಯಾಗಿದ್ದ ಶ್ರೀಧರ ಹರಿಕಂತ್ರ, ಮಾತನಾಡಿದರು. ಯುವಕರು ಸ್ವಾರ್ಥವನ್ನು ಬದಿಗಿಟ್ಟು ಸಮಾಜ ಸೇವೆ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿಠ್ಠಲ ಖೇಮು ಹರಿಕಂತ್ರ, ಮಾತನಾಡಿ ಕೋಡಿಬೀರ ಯುವಕ ಮಂಡಳ ಕೇವಲ ಹೆಸರಿಗೆ ಮಾತ್ರ ಇರದೆ ಸಮಾಜಕ್ಕೆ ಉಪಯುಕ್ತವಾದ ಕೆಲಸ ಮಾಡಬೇಕು ಎಂದರು.

ಕುಂದಾ ಹಾಗೂ ಕಲ್ಪನಾ ಇವರುಗಳ ಸ್ವಾಗತಗೀತೆ ನಂತರ ನೂನಾ ವಿ. ಹರಿಕಂತ್ರ, ಸ್ವಾಗತಿಸಿದರು. ಕೋಡಿಬೀರ ಯುವಕ ಮಂಡಳದ ಅಧ್ಯಕ್ಷ ಸಂದೇಶ ಭಗತ್ ವರದಿ ವಾಚಿಸಿದರು. ನಗರಸಭಾ ಸದಸ್ಯರಾದ ಶಾಲಿ ದುಮ್ಮಾ ಉಳ್ವೇಕರ, ಗಣಪತಿ ದುಮ್ಮಾ ಉಳ್ವೇಕರ, ಪ್ರಸಾದ ಕಾರವಾರಕರ್, ಸಂಜೀವ ಡಿ. ಹರಿಕಂತ್ರ, ಚಂದ್ರಕಾಂತ ಖಾರ್ವಿ, ವಿಠ್ಠಲ ಖೇಮು ಹರಿಕಂತ್ರ, ರಟಿಯಾ ಎಂ. ಹರಿಕಂತ್ರ, ಕೃಷ್ಣ ಬಿ. ಹರಿಕಂತ್ರ, ವೇದಿಕೆಯಲ್ಲಿ ಉಪಸ್ಥಿತರಿದ್ದರು. ದೇವಾನಂದ ದುರ್ಗೇಕರ ಕಾರ್ಯಕ್ರಮ ನಿರೂಪಿಸಿದರು. ವಿನಾಯಕ ಆರ್. ಹರಿಕಂತ್ರ, ವಂದಿಸಿದರು.

# ನಾಗರಿಕ ಸಮಿತಿಯ ಸಭೆ

ದಾಂಡೇಲಿ: ಸ್ಥಳೀಯ ಪೋಲಿಸ್ ಇಲಾಖೆಯ ಆಶ್ರಯದಲ್ಲಿ ನಡೆದ ನಾಗರಿಕ ಸಮಿತಿಯ ಸಭೆಯಲ್ಲಿ ಹಲವಾರು ನಾಗರಿಕ ಸಂಸ್ಥೆಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಸಲಾಯಿತು.

ಹಳೆ ದಾಂಡೇಲಿಯ ಪೋಲಿಸ್ ಚೌಕಿಯನ್ನು ಪುನರಾರಂಭಿಸಬೇಕು. ನಗರದ ರಸ್ತೆಯ ಪಾಟ್‌ಹೋಲ್ ತುಂಬಿ ಸರಿಪಡಿಸಬೇಕು. ಅಪಾಯಕಾರಿಯಾದ ರೋಡ ಹಂಪ್ಸಗಳನ್ನು ಬಣ್ಣ ಬಳಿದು ಏಕರೂಪತೆ ತರಬೇಕು. ನಂದಗೋಕುಲ ಉದ್ಯಾನದಲ್ಲಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂಬ ವಿಷಯಗಳ ಕುರಿತು ಚರ್ಚೆ ನಡೆಯಿತು. ಡಿ.ವೈ. ಎಸ್.ಪಿ. ಬಿ.ವಿ. ನಾಯ್ಕ ಹೆಚ್ಚಿನ ಸಮಸ್ಯೆಗಳಿಗೆ ತಕ್ಷಣ ಗಮನ ನೀಡುವ ಭರವಸೆ ನೀಡಿದರು.

ಸಭೆಯಲ್ಲಿ ಇತರ ಪೋಲಿಸ್ ಅಧಿಕಾರಿಗಳಾದ ಎ. ಬಿ. ಬಸರಿ, ಡಿ.ಆರ್. ರಾಠೋಡ, ಎಚ್. ಜಿ. [illegible]ಣಿ, ಜಿ. ಕೆ. ಕಾಂಬ್ಳೆ, ನಗರ ಸಭಾ ಉಪಾಧ್ಯಕ್ಷೆ ಯಾಸ್ಮೀನ್ ಕಿತ್ತೂರ, ನಗರಸಭಾಸದಸ್ಯ ಎನ್. ಜಿ. ಸಾಳುಂಕೆ, ಮಾಜಿ ನಗರಾಧ್ಯಕ್ಷ ಕೆ. ಎಸ್.ಪಾಟೀಲ ಮತ್ತಿತರರು ಪಾಲ್ಗೊಂಡಿದ್ದರು.

ಪರಿಸರ



# ಅರಣ್ಯ ಮತ್ತು ನಾಗರಿಕತೆ

ಆದಿಯಿಂದಲೂ ಸಸ್ಯವರ್ಗ ಪ್ರಾಣಿವರ್ಗಗಳು ಪರಸ್ಪರ ಪೋಷಕಗಳಾಗಿ ಅವಲಂಬಿಸಿಕೊಂಡು ಬಂದಿವೆ. ಭೂಮಿ ಮಾರ್ಪಾಡಾಗಿ ಎಷ್ಟೋ ಕಾಲದ ಮೇಲೆ ಜೀವರಾಶಿ ಕಾಣಿಸಿಕೊಂಡಿತು ಎಂದು ಹೇಳಲಾಗುತ್ತದೆ. ಜೀವರಾಶಿ ಬದುಕಲು ಅವಶ್ಯವಿದ್ದ ಪರಿಸರ, ಆಹಾರಗಳನ್ನು ಪೂರೈಸಲು ಸಸ್ಯ ವರ್ಗವು ಅಷ್ಟರಲ್ಲಿ ಸಿದ್ಧವಾಗಿತ್ತು. ನಿಬಿಡವಾಗಿ ಬೆಳೆದ ಗಿಡ ಮರಗಳಿಂದ ಹಣ್ಣು ಹಂಪು ಗೆಡ್ಡೆ ಬೇರುಗಳನ್ನೂ ಹಾಗೂ ಹುಲ್ಲುಗಾವಲುಗಳನ್ನೂ ಅರಣ್ಯಗಳು ಪೂರೈಸುತ್ತಿದ್ದುದಲ್ಲದೇ, ಮಾಂಸಾಹಾರ ಪೂರೈಕೆಗೆ ಅವಶ್ಯವಿದ್ದ ವನ್ಯಪ್ರಾಣಿಗಳನ್ನೂ, ಆಹಾರ ಬೇಯಿಸಲು ಕಟ್ಟಿಗೆಯನ್ನೂ ಅರಣ್ಯವೇ ಪೂರೈಸುತ್ತಿತ್ತು. ಮಾನವ ಪ್ರಾಣಿ ಮೊದಲು ಅಸ್ತಿತ್ವದಲ್ಲಿ ಬರುವ ಕಾಲಕ್ಕೆ ಅರಣ್ಯಗಳೂ ಹುಲ್ಲುಗಾವಲುಗಳೂ ಬೇಟೆಯ ಮೃಗಗಳೂ ಸಾಕಷ್ಟು ತುಂಬಿದ್ದವೆಂದು ತೋರುತ್ತದೆ.

ಮಾನವ ಸಂಖ್ಯೆ ಬೆಳೆಯುತ್ತ ನಡೆದಂತೆ ಸುಲಭವಾಗಿ, ಪರಿಶ್ರಮವಿಲ್ಲದೆ ಆಹಾರ ದೊರೆವ ಸ್ಥಳಗಳನ್ನು ಹುಡುಕಲು ಸಂಚಾರ ಕ್ರಮ ನಡೆಯಿತು. ಸಮೃದ್ಧಿಯಾದ ನೀರಿನ ಪುರವತೆ, ತಮಗಾಗಿ ಮತ್ತು ತಮ್ಮ ದನ ಕರುಗಳಿಗಾಗಿ ಆಹಾರವು ಸುಲಭವಾಗಿ ದೊರೆಯುವ ಏರ್ಪಾಡು ಇದ್ದಲ್ಲೆಲ್ಲಾ ಸಂಚರಿಸಿ, ಗುಂಪುಗಳಾಗಿ ಬೀಡು ಬಿಟ್ಟು ನೆಲಸಿ, ಮನೆ ಮಾರು ಕಟ್ಟಿಕೊಂಡು ಮಾನವನು ವಾಸಿಸಹತ್ತಿದನು. ಆಹಾರದ ಕೊರತೆ ಹೆಚ್ಚಾದಂತೆ ಮನುಷ್ಯನು ಒಕ್ಕಲುತನವನ್ನು ಪ್ರಾರಂಭಿಸಿ ತನ್ನ ಆಹಾರವನ್ನು ತಾನೇ ಬೆಳೆಯ ಹತ್ತಿದನು. ಕೃಷಿಕವರ್ಗ ಪ್ರಾರಂಭವಾದ ಮೇಲೆ ಫಲಪ್ರದ ಪ್ರದೇಶಗಳು ಹಾಗೂ ಉತ್ತಮ ಆಹಾರವಾಗುವ ಧಾನ್ಯಗಳ ಸಲುವಾಗಿಯೂ ಅನೇಕ ಪ್ರಯೋಗಗಳು ನಡೆದವು. ದಿನವೂ ಹೆಚ್ಚುತ್ತ ನಡೆದ ಜನಸಂಖ್ಯೆಗೆ ಭೂಮಿ ಕಡಿಮೆ ಬಿದ್ದಂತೆ ಗಿಡ ಮರಗಳನ್ನು ಕಡಿದು ಹೊಸ ಭೂಮಿಯನ್ನು ಸಾಗು ಮಾಡಲು ಪ್ರಯತ್ನಗಳಾದವು. ಬರಬರುತ್ತ ಅರಣ್ಯದ ಬಹು ಭಾಗವು ಒಕ್ಕಲುತನದ ಭೂಮಿಯಾಗಿ ಮಾರ್ಪಾಡಾಗುತ್ತ ಬಂದಿದೆ. ವ್ಯವಸಾಯಕ್ಕಾಗಿ ಮೊದಲ ಸಲ ಮಣ್ಣನ್ನು ಕೆದರಿದಂದಿನಿಂದಲೇ ಮಾನವನ ಸುಧಾರಣೆಗೆ ಪ್ರಾರಂಭವಾಯಿತು. ನಾಗರಿಕತೆಯ ಅಡಿಗಲ್ಲು ಸ್ಥಾಪಿತವಾಯಿತು. ವಿಜ್ಞಾನ,ವಿಕಾಸ, ಪ್ರಗತಿಗಳಿಗೆ ಮೊದಲಾಯಿತು.

ಭೂಮಿಯ ಬಹುಭಾಗವು ಅರಣ್ಯದಿಂದ ತುಂಬಿದಾಗ ಅದರ ಮಹತ್ವವಾಗಲಿ ಅದನ್ನು ಉಳಿಯಬೇಕೆಂಬ ಅವಶ್ಯಕತೆಯಾಗಲಿ ಇರಲಿಲ್ಲ. ಅರಣ್ಯ ಕಡಿಮೆಯಾಗುತ್ತ ನಡೆದಂತೆ ಹವಾಮಾನದಲ್ಲಿ, ನೀರಿನ ಪುರವಠೆಯಲ್ಲಿ, ಮಳೆ ಗಾಳಿಗಳಲ್ಲಿ ಬದಲಾವಣೆ ಆಗಿ, ಉತ್ತಮ ಅರಣ್ಯ ಜನ್ಯ ವಸ್ತುಗಳ ಕೊರತೆ ಅನಿಸಹತ್ತಿದಾಗ ಮಾನವನು ಯೋಚನೆಗೆ ಒಳಗಾದನು. ಜೀವನಕ್ಕೆ ಅರಣ್ಯವೂ ಒಕ್ಕಲುತನದಷ್ಟೇ ಅವಶ್ಯ, ಅನಿವಾರ್ಯವೆಂದು ಕಂಡುಕೊಂಡನು. ಅರಣ್ಯಗಳನ್ನು ಸುಡುವುದು ಕಡಿಯುವುದು ಹಾಗೂ ನಾಶಮಾಡುವುದು ಮೊದಲ ಕ್ರಮಗಳು ಮಾನವನ ಹಿತರಕ್ಷಣೆಗೆ ವಿರುದ್ಧವಾದ ಕ್ರಮಗಳೆಂದೂ, ಗಿಡ ನೆಡುವ ಸಂರಕ್ಷಿಸುವ ಹಾಗೂ ಉತ್ತಮ ಅರಣ್ಯ ಬೆಳೆಸುವ ಕ್ರಮಗಳು, ಕಲ್ಯಾಣ ಕ್ರಮಗಳೆಂದೂ, ಅವನಿಗೆ ಅರಿವಾಗ ಹತ್ತಿತು. ತನಗೆ ಅವಶ್ಯವಿದ್ದಾಗ ಕಡಿದ ಮರದ ಬದಲು ಮತ್ತೊಂದನ್ನು ನೆಡಲೇಬೆಕಂಬ ಕಟ್ಟು ನಿಯಮಗಳು ಕೆಲದೇಶಗಳಲ್ಲಿ ಸಾವಿರಾರು ವರ್ಷಗಳ ಪೂರ್ವದಿಂದ ನಡೆದು ಬಂದ ರೂಢಿಗಳಾಗಿವೆ. ಭಾರತದಲ್ಲಿಯೂ ಪೂರ್ವಜನರು ಈ ಮಾತಿನ ಸತ್ಯತೆಯನ್ನು ಕಂಡುಕೊಂಡಿದ್ದರು. ಗೃಹಸ್ಥಾಶ್ರಮಿಯಾದ ಪ್ರತಿಯೊಬ್ಬನು ಗಿಡಗಳನ್ನು ನೆಡಲೆಬೇಕೆಂದು ಶಾಸ್ತ್ರಗಳ ಹೇಳಿಕೆ. ಆರ್ಯರು ಭಾರತವನ್ನು ಪ್ರವೇಶಿಸುವ ಮುನ್ನ ಇದ್ದಂತೆ, ಅವರು ನೆಲೆಸಿದ ನಂತರವೂ ಅರಣ್ಯ ಹಾಗೂ ಒಕ್ಕಲುತನ, ಇವೆರಡಕ್ಕೂ ಯೋಗ್ಯವಾದ ಮಹತ್ವವನ್ನು ಕೊಡಲಾಗುತ್ತಿತ್ತು. ಇತಿಹಾಸ ಕಾಲದಲ್ಲೂ ಸೈನಿಕರು ಅರಣ್ಯಗಳನ್ನು ನಾಶ ಮಾಡದಂತೆ ಅಪ್ಪಣೆ ವಿಧಿಸಲ್ಪಟ್ಟ ಉದಾಹರಣೆಗಳು ಈಗಲೂ ಸಿಗುತ್ತಿವೆ.

ನಮ್ಮ ಹವಾಮಾನವು ಅರಣ್ಯದ ಮೇಲೆ ಬಹುಮಟ್ಟಿಗೆ ಅವಲಂಬಿಸಿದೆ. ನಮ್ಮ ನೀರಿನ ಪುರವಠೆ, ವಿಶೇಷತಃ ಝರಿಗಳು ಬಾವಿಗಳು ಹರಗಡಿಯದ ಹೊಳೆ ಹಳ್ಳಗಳು ನಮ್ಮ ಅರಣ್ಯದ ಮೇಲೆ ಅವಲಂಬಿಸಿದೆ. ನಾಡಿನ ಸಂರಕ್ಷಣೆಗೆ ಅವಶ್ಯಕವಿದ್ದ ವಸ್ತುಗಳ ಪೂರೈಕೆಗೆ ಅರಣ್ಯವಿಲ್ಲದೆ ಸಾಧ್ಯವಿಲ್ಲ. ಜೀವನಕ್ಕೆ ಅನ್ನ ನೀರುಗಳು ಅವಶ್ಯವಿದ್ದಂತೆ, ನೆಳಲು ಇರಲಿಕ್ಕೆ ಮನೆ ಅಷ್ಟೇ ಅವಶ್ಯಕ. ಮನೆ ಕಟ್ಟಲಿಕ್ಕೆ ಹಾಗೂ ಉರುವಲಕ್ಕೆ ಕಟ್ಟಿಗೆಯ ಅವಶ್ಯಕತೆ ಎಷ್ಟೆಂಬುದನ್ನು ಹೇಳುವುದೇ ಬೇಡ. ಅರಣ್ಯ ಉತ್ಪಾದನಾ ವಸ್ತುವನ್ನು ನೋಡದೆ ಒಂದು ದಿನವನ್ನೂ ಕೂಡ ಕಳೆಯುವುದು ಸಾಧ್ಯವಿಲ್ಲದಷ್ಟು ಮಟ್ಟಿಗೆ ಅದು ನಮ್ಮನ್ನಾವರಿಸಿದೆ. ನಮ್ಮ ಕಾಗದ, ಸೀಸದಕಡ್ಡಿ, ಮಣೆ, ಕುರ್ಚಿ, ಮೇಜು, ಬೆಂಚು ಮೊದಲಾದ ನಿತ್ಯ ಜೀವನದಲ್ಲಿನ ಅವಶ್ಯಕತೆಗಳನ್ನು ಎಷ್ಟೊಂದು ಎಣಿಸಿದರೂ ತೀರದು. ಕಟ್ಟಿಗೆ ಇದ್ದರೇನೇ ಒಕ್ಕಲಿಗನ ರಂಟೆ ಕುಂಟೆ ಮತ್ತು ಉಳಿದ ಅವನ ಒಕ್ಕಲುತನದ ಉಪಕರಣಗಳು ಸಾಧ್ಯ. ಉರುವಲಕ್ಕಂತೂ ಕಟ್ಟಿಗೆ ಇದ್ದಲುಗಳು ಬೇಕೇ ಬೇಕು. ಹೀಗಿದ್ದರೂ ಇಷ್ಟೊಂದು ಕಟ್ಟಿಗೆ ಹೇಗೆ ಬರುತ್ತದೆ? ಎಲ್ಲಿಂದ ಬರುತ್ತದೆ? ಎಷ್ಟು ಬರುತ್ತಿದೆ? ಹೀಗೆಯೇ ಸಾಗಿದರೆ ಎಷ್ಟು ದಿನಗಳವರೆಗೆ ಅದು ದೊರೆತೀತು? ಎಂದು ವಿಚಾರಿಸುವವರೆಷ್ಟು ಜನ ? ಇದನ್ನು ಜನ ಮರೆತಿದ್ದರಿಂದಲೇ ಸರ್ಕಾರವು ಈ ಪ್ರಶ್ನೆಯನ್ನು ವನಮಹೋತ್ಸವದ ಹೆಸರಿನಲ್ಲಿ ಜನತೆಯ ಮುಂದೆ ತಂದಿತು. ಆದರೆ ಅದು ಒಣ ಮಹೋತ್ಸವವೆಂಬ ಹಾಸ್ಯಕ್ಕೆ ಈಡಾದುದು ನಾಡ ದುರದೃಷ್ಟ. ಇದರ ಮಹತಿಯನ್ನು ಜನತೆ ಕೆಲವೊಮ್ಮೆ ಯಾದರೂ ಅರಿತು ಆಚರಿಸಿದರೆ ಈ ಕಾರ್ಯದಲ್ಲಿ ತೋರುವ ಉತ್ಸಾಹಕ್ಕಾಗಿ ನಾಡಿನ ಹಿತದ ಗುರಿಯಾಗಿ ಉಳ್ಳ ಸರ್ವರಿಗೂ ಸಂತೋಷವಾಗದಿರದು.

-ಮುಂದುವರಿಯುವುದು.

## ಸ್ವಾಭಿಮಾನಿಗಳಾಗಿ ಬದುಕಲು ಅರಣ್ಯ ಇಲಾಖಾ ಲಿಪಿಕ ನೌಕರರಿಗೆ ಕರೆ

ದಾಂಡೇಲಿ: ಜಿಲ್ಲೆಯ ಕರ್ನಾಟಕ ಅರಣ್ಯ ಇಲಾಖಾ ಲಿಪಿಕ ನೌಕರರು, ತಗ್ಗಿ ಬಗ್ಗಿ ನಡೆಯದೇ ಸ್ವಾಭಿಮಾನಿಗಳಾಗಿ ಬದುಕಲು ನೂತನವಾಗಿ ಆಯ್ಕೆಯಾದ ಜಿಲ್ಲಾಧ್ಯಕ್ಷ, ಮಾಳಗಿಮನಿಯವರು ಲಿಪಿಕ ನೌಕರರಿಗೆ ಕರೆ ನೀಡಿದರು. ಇತ್ತೀಚೆಗೆ ಕುಳಗಿ ಪ್ರಾಕೃತಿಕ ಶಿಬಿರದಲ್ಲಿ ತಾಲೂಕಾ ಶಾಖೆಯ ಅಧ್ಯಕ್ಷ ಕೆ. ಡಿ. ಹಂಡಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಇತ್ತಿತ್ತಲಾಗಿ ಲಿಪಿಕ ನೌಕರರ ಮೇಲೆ ಅಧಿಕಾರಿಗಳ ದೌರ್ಜನ್ಯ ಹೆಚ್ಚಾಗುವುದನ್ನು ತಡೆಗಟ್ಟಲು ಮುಂದಾಗಬೇಕಿದೆ ಎಂದರು. ಕಾರ್ಯದರ್ಶಿ ನಾಗರಾಜ ಉಳ್ಳಾಗಡ್ಡಿ ಮಾತನಾಡಿ ಬಲಾಢ್ಯ ವ್ಯಕ್ತಿ ಹಾಗೂ ಸಂಘಟನಾ ಚತುರರಾದ ನೌಕರರಿಂದ ಸಂಘದ ಸಂಘಟನೆ ಸಾಧ್ಯವೆಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಕೆ. ಡಿ. ಹಂಡಿ ಮಾತನಾಡಿ ಸಂಘ ಮತ್ತು ಸಂಘಟನೆ ಎರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅದಕ್ಕಾಗಿ ಸಂಘದ ಸಂಘಟನೆಗಾಗಿ ಸಾಮೂಹಿಕವಾಗಿ ಕೆಲಸ ಮಾಡಬೇಕಾಗಿದೆ. ಸಂಘದ ಕೆಲಸ ನಿಂತ ನೀರಾಗದೇ ನಿರಂತರವಾಗಿ ಹರಿಯುವ ನೀರಿನಂತೆ ಜರುಗಬೇಕೆಂದು ನುಡಿದರು.

ಸಭೆಯಲ್ಲಿ ಎಸ್. ಆರ್. ವೆರ್ಣೇಕರ, ವಿ. ಪಿ. ನಾಯ್ಕ, ಪಿ. ಡಿ. ಬೋರಕರ,ಲಿಪಿಕ ನೌಕರರ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ರಾಜು ಆರ್.ನಾಯ್ಕ ಸ್ವಾಗತಿಸಿದರು. ಪಿ. ಡಿ. ಗಣೇಶಕರ ಪ್ರಾಸ್ತಾವಿಕ ಭಾಷಣ ಮಾಡಿದರು. ಕೊನೆಯಲ್ಲಿ ವಿ. ಆರ್. ಆಚಾರಿಯವರು ವಂದಿಸಿದರೆ, ಕೊನೆಯಲ್ಲಿ ಪಿ. ಡಿ. ಗಣೇಕರ ಕಾರ್ಯಕ್ರಮವನ್ನು ನಿರೂಪಿಸಿದರು.

## ಅತೀಂದ್ರಿಯ ಶಕ್ತಿಗಳು ನಮಗೆ ಪ್ರಯೋಜನಕಾರಿಯ ಬದಲು ಒಂದು ಆತಂಕ

ಒಮ್ಮೆ ಒಬ್ಬ ಸಾಧುವಿಗೆ ಅದ್ಭುತ ಸಿದ್ಧಿಗಳು ಬಂದವು. ಇದಕ್ಕಾಗಿ ಅವನು ಅಹಂಕಾರಪಟ್ಟನು. ಆದರೆ ರಾಮನು ಒಳ್ಳೆಯ ಮನುಷ್ಯನಾಗಿದ್ದ. ಸ್ವಲ್ಪ ತಪಸ್ಸನ್ನೂ ಮಾಡಿದ್ದ. ಒಂದು ದಿನ ದೇವರು ಒಬ್ಬ ಸಾಧುವಿನಂತೆ ಇವನೆದುರಿಗೆ ಬಂದು ಸ್ವಾಮಿಗಳೆ ನಿಮಗೆ ಅದ್ಭುತ ಪವಾಡಗಳನ್ನು ಮಾಡುವ ಶಕ್ತಿ ಇದೆಯಂತೆ, ಎಂದ. ಸಾಧು ಅವರನ್ನು ಗೌರವದಿಂದ ಬರ ಮಾಡಿಕೊಂಡು ಕುಳಿತುಕೊಳ್ಳುವುದಕ್ಕೆ ಒಂದು ಆಸನವನ್ನು ನೀಡಿದ. ಆಗ ಒಂದು ಆನೆ ಎದುರಿಗೆ ಹೋಗುತ್ತಿತ್ತು. ಸಾಧುವಿನ ವೇಶದಲ್ಲಿದ್ದ ಭಗವಂತ ನಿಮಗೆ ಈ ಆನೆಯನ್ನು ಕೊಲ್ಲುವುದಕ್ಕೆ ಸಾಧ್ಯವೇ? ಎಂದು ಕೇಳಿದ. ಇದು ನನಗೆ ಸಾಧ್ಯ ಎಂದು ಅವನು ಹೇಳಿದ. ಹಾಗೆ ಹೇಳುತ್ತ ಒಂದು ಚುಟಿಕೆ ಮಣ್ಣನ್ನು ಮಂತ್ರಿಸಿ ಆನೆಯ ಮೇಲೆ ಎಸೆದ. ಆನೆ ಕೆಲವು ಕಾಲ ನರಳಿ ಸತ್ತು ಬಿತ್ತು. ದೇವರು ನಿನಗೆ ಅದ್ಭುತವಾದ ಶಕ್ತಿ ಇದೆ. ನೀನು ಆನೆಯನ್ನು ಕೊಂದು ಬಿಟ್ಟೆ .ಸಾಧು ಹೆಮ್ಮೆಯಿಂದ ಮುಗುಳ್ನಕ್ಕ. ಆ ಭಗವಂತ ನೀನು ಸತ್ತ ಆನೆಯನ್ನು ಬದುಕಿಸಬಲ್ಲೆಯಾ ಎಂದು ಕೇಳಿದ. ಅದು ಕೂಡ ಸಾಧ್ಯ ಎಂದು ಸಾಧು. ಮತ್ತೊಂದು ಚಿಟಿಕೆ ಮಣ್ಣನ್ನು ಅದರ ಮೇಲೆ ಹಾಕಿ ಮಂತ್ರಿಸಿದ. ಆನೆ ಸ್ವಲ್ಪ ಹೊತ್ತು ನರಳಾಡಿ ಪುನಃ ಬದುಕಿ ಬಂತು. ಆಗ ದೇವರು ನಿನಗೇನೊ ಅದ್ಭುತ ಶಕ್ತಿ ಇದೆ. ನಾನು ನಿಮ್ಮನ್ನು ಒಂದು ವಿಷಯ ಕೇಳಲೆ? ನೀನು ಆನೆಯನ್ನು ಸಾಯಿಸಿದೆ ಮತ್ತು ಬದುಕಿಸಿದೆ. ಆದರೆ ಅದರಿಂದ ನಿನಗೆ ಏನು ಪ್ರಯೋಜನವಾಯಿತು. ಇದರಿಂದ ನೀನು ಭಗವಂತನನ್ನು ಕಾಣಲು ಸಹಾಯ ಮಾಡಿತೆ? ಇದರಿಂದ ನೀನು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದೆಯೇ? ಇದನ್ನು ಹೇಳಿ ದೇವರು ಮಾಯವಾದ.

ಧರ್ಮ ನೀತಿ ಬಹಳ ಸೂಕ್ಷ್ಮವಾದುದು. ಒಬ್ಬನಿಗೆ ಒಂದು ಸಾಸಿವೆಕಾಳಿನಷ್ಟು ಅಹಂಕಾರವಿದ್ದರೂ ಅವನು ಭಗವಂತನನ್ನು ಸಾಕ್ಷಾತ್ಕಾರ ಮಾಡಲಾರ. ಒಂದು ಸೂಜಿಯಲ್ಲಿ ಸ್ವಲ್ಪ ಧೂಳಿದ್ದರೂ ದಾರವನ್ನು ಪೋಣಿಸುವುದಕ್ಕೆ ಆಗುವುದಿಲ್ಲ.

- ರಾ.ಕೃ.



ಮಕ್ಕಳ ಕತೆ

## ಕಟ್ಟಿರುವೆ ಸಾಮರ್ಥ್ಯ

ಒಂದು ಕಾಡಿನಲ್ಲಿ ಸುಂದರವಾದ ಸಿಹಿನೀರಿನ ಕೆರೆಯೊಂದಿತ್ತು. ಆ ಕಾಡಿನ ಪ್ರಾಣಿಗಳೆಲ್ಲವೂ ಅಲ್ಲೇ ನೀರು ಕುಡಿದು ಸುಖವಾಗಿದ್ದವು.

ಹೀಗಿರಲು ಒಮ್ಮೆ ಬಂದರ ಪ್ರವಾಹದಿಂದಾಗಿ ಮೊಸಳೆಯೊಂದು ಅಲ್ಲಿಗೆ ಬಂದು ಸೇರಿಕೊಂಡಿತು. ಅದು ನೀರು ಕುಡಿಯಲು ಬಂದ ಪ್ರಾಣಿಗಳನ್ನೆಲ್ಲ ನಿರ್ದಯೆಯಿಂದ ಕೊಂದು ತಿನ್ನುತ್ತಿತ್ತು. ಆಗ ಪ್ರಾಣಿಗಳು ತುಂಬ ಭಯಗೊಂಡವು. ತಮ್ಮೆದುರಿಗೇ ಸಮೃದ್ಧವಾದ ನೀರಿದ್ದರೂ ಕುಡಿಯಲಾಗದೆ ದಾಹದಿಂದ ಬಳಲತೊಡಗಿದವು.

ಒಂದು ದಿನ ಸಭೆ ಸೇರಿದ ಪ್ರಾಣಿಗಳು ತಮ್ಮೆಲ್ಲರಿಗೂ ಕಂಟಕವಾಗಿರುವ ಮೊಸಳೆಯ ಬಗ್ಗೆ ಚರ್ಚಿಸಿದವು. ಹೇಗಾದರೂ ಮಾಡಿ ಈ ಮೊಸಳೆಯನ್ನು ಓಡಿಸಲೇಬೇಕು ಅಥವಾ ಸಾಯಿಸಲೇಬೇಕು. ಇಲ್ಲದಿದ್ದರೆ ನಾವೆಲ್ಲರೂ ದಾಹದಿಂದ ಸಾಯಬೇಕಾಗುತ್ತದೆ ಎಂದುಕೊಂಡವು.

ಯಾರಾದರೂ ಸರಿ, ಈ ಮೊಸಳೆಯ ದವಡೆಯಿಂದ ನಮ್ಮನ್ನು ರಕ್ಷಿಸಿದರೆ ಅವರನ್ನೇ ಇನ್ನು ಮುಂದೆ ನಮ್ಮಗಳ ನಾಯಕನೆಂದು ಗೌರವಿಸಿ ಒಪ್ಪಿಕೊಳ್ಳುತ್ತೇವೆ ಎಂದು ಘೋಷಿಸಿದವು.

ನಾಯಕ ಪಟ್ಟದ ಆಸೆ ಪಟ್ಟ ಪ್ರಾಣಿಗಳೆಲ್ಲವೂ ಮೊಸಳೆಯ ದೈತ್ಯಾಕಾರವನ್ನು ಕಲ್ಪಿಸಿಕೊಳ್ಳುತ್ತಿದ್ದಂತೆಯೇ ಗಡಗಡ ನಡುಗತೊಡಗಿದವು. ಎಷ್ಟು ಹೊತ್ತು ಕಾದು ಕುಳಿತರೂ ಯಾರೂ ಮುಂದೆ ಬರಲಿಲ್ಲ. ಆಗ ಒಂದು ಕಟ್ಟಿರುವೆ ವೇದಿಕೆಗೆ ಬಂದು ನಾನು ಮೊಸಳೆಯನ್ನು ಕೊಲ್ಲುತ್ತೇನೆ. ನನ್ನನ್ನು ನಾಯಕನೆಂದು ಒಪ್ಪಿಕೊಳ್ಳುತ್ತೀರೋ ಎಂದು ಸವಾಲೆಸೆಯಿತು.

ಆಗ ಎಲ್ಲಾ ಪ್ರಾಣಿಗಳೂ ಮುಸಿ ಮುಸಿ ನಗುತ್ತ ಏಲೈ ತಲೆ ತಿರುಕ ಕಟ್ಟಿರುವೆಯೇ, ನಿನಗೆ ತಮಾಷೆ ಮಾಡಲು ಬೇರೆ ಸಮಯವೇ ಸಿಗಲಿಲ್ಲವೇ ಎಂದು ಮೂದಲಿಸಿದವು.

ಅದರಿಂದ ತುಂಬಾ ಅವಮಾನಿತನಾದ ಕಟ್ಟಿರುವೆ ನೀವು ನಾಯಕನನ್ನು ನಾಯಕನೆಂದು ಸ್ವೀಕರಿಸದಿದ್ದರೂ ಸರಿ. ನಮ್ಮ ಈ ಮೂದಲಿಕೆಗೆ ಉತ್ತರ ಕೊಡುವ ಸಲುವಾಗಿಯಾದರೂ ಆ ಮೊಸಳೆಯನ್ನು ಕೊಂದು ನನ್ನ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸುತ್ತೇನೆ ಎಂದಿತು. ಆ ಪ್ರಕಾರ ಕೆರೆಯ ಹತ್ತಿರ ಹೋಗಿ ಎಲೆಯೊಂದನ್ನು ಕಿತ್ತು ನೀರಿಗೆಸೆಯಿತು. ಎಲೆಯ ಮೇಲೆ ತೇಲುತ್ತಾ ಹೋಗಿ ಗೊತ್ತಾಗದ ಹಾಗೆ ಮೊಸಳೆಯ ಕಣ್ಣು ರೆಪ್ಪೆಯೊಳಗೆ ಸೇರಿಕೊಂಡಿತು. ಎರಡು ಕಣ್ಣು ಗುಡ್ಡೆಗಳನ್ನು ಕಚ್ಚಿ ಕಚ್ಚಿ ಗಾಯಗೊಳಿಸಿತು. ದೃಷ್ಟಿ ಕಳೆದುಕೊಂಡ ಮೊಸಳೆ ದಡಕ್ಕೆ ಬಂದು ಬಿದ್ದಿತು. ಎಲ್ಲಾ ಪ್ರಾಣಿಗಳೂ ಹೊಡೆದು ಸಾಯಿಸಿದವು.

ಆಗ ವ್ಯಂಗಿಸಿದ್ದ ಪ್ರಾಣಿಗಳೆಲ್ಲವೂ ಕಟ್ಟಿರುವೆಯ ಮಹದುಪಕಾರವನ್ನು ಬಾಯಿ ತುಂಬ ಹೊಗಳಿದವು.

ಅದೇ ಕೆರೆಯೊಳಗಿದ್ದ ಎರಡು ಮೀನುಗಳು ನೋಡಿದೆಯಾ ಶಕ್ತಿಗಿಂತ ಯುಕ್ತಿ ಮೇಲೆಂಬುದನ್ನು ಎಂದು ಮಾತನಾಡಿಕೊಂಡವು.

## ದಾಂಡೇಲಿ ನಗರಸಭೆಯಲ್ಲಿ 29 ಲಕ್ಷ ರೂಪಾಯಿಯ ಉಳಿತಾಯ ಬಜೆಟ್ ಮಂಡನೆ

ದಾಂಡೇಲಿ: ಆರಂಭದ ಶಿಲ್ಕು ರೂ.41ಲಕ್ಷ ಸೇರಿದಂತೆ 2003-04 ನೇ ಸಾಲಿಗೆ ದಾಂಡೇಲಿ ನಗರಸಭೆಗೆ ರೂ. 29ಲಕ್ಷದ ಉಳಿತಾಯದ ಬಜೆಟನ್ನು ಅಧ್ಯಕ್ಷ ಡಿ. ಎಚ್. ಭಬ್ಬಿಯವರು ಮಂಡಿಸಿರುತ್ತಾರೆ.

ಒಟ್ಟು ರೂ.5 ಕೋಟಿ 91 ಲಕ್ಷ ಆದಾಯದಲ್ಲಿ ರೂ. 5 ಕೋಟಿ 62 ಲಕ್ಷ ಖರ್ಚನ್ನು ನಗರಸಭೆ ಹಮ್ಮಿಕೊಂಡಿದೆ.

ನಗರಸಭೆ ಕರಗಳು ಹಾಗೂ ದರಗಳಿಂದ ರೂ. 76 ಲಕ್ಷ , ವಿಶೇಷ ಹರಾಜುಗಳ ಸಂಬಂಧ ರೂ. 6.92 ಲಕ್ಷ, ನಗರಸಭೆ ಆಸ್ತಿ ಮತ್ತು ಅಧಿಕಾರದಿಂದ ರೂ. 1 ಕೋಟಿ 68 ಲಕ್ಷ, ಸಹಾಯಧನ ಹಾಗೂ ವಂತಿಕೆಗಳಿಂದ ರೂ. 2 ಕೋಟಿ 15 ಲಕ್ಷ ಆದಾಯದ ಮೂಲಗಳಾಗಿವೆ.

ಸಾಮಾನ್ಯ ಆಡಳಿತ ಮತ್ತು ಸಂಗ್ರಹಣೆ ಶುಲ್ಕಗಳು ರೂ. 60.21 ಲಕ್ಷ, ಸಿಬ್ಬಂದಿ ವೇತನ ರೂ. 13.5 ಲಕ್ಷ, ನಿವೃತ್ತಿ ವೇತನ ವಂತಿಕೆ ರೂ. 10 ಲಕ್ಷ, ಸಾರ್ವಜನಿಕ ಸುರಕ್ಷತೆ ರೂ. 34.35 ಲಕ್ಷ,ಸಾರ್ವಜನಿಕ ಆರೋಗ್ಯ ರೂ. 92.20 ಲಕ್ಷ, ಆರೋಗ್ಯ ಮೇಲ್ವಿಚಾರಣೆ ರೂ. 19.98 ಲಕ್ಷ, ಸಾಮಾನ್ಯ ಸಂರಕ್ಷಣೆಗಾಗಿ ರೂ. 57.30 ಲಕ್ಷ, ಪಶುಪಥಾಲಯ ಕಟ್ಟಲು ರೂ. 13 ಲಕ್ಷ, ತೋಟಗಳ ನಿರ್ವಹಣೆ ರೂ. 8.95 ಲಕ್ಷ, ಜಾತ್ರೆಗಳು, ಉತ್ಸವಕ್ಕಾಗಿ ರೂ. 1.80 ಲಕ್ಷ, ಸಾರ್ವಜನಿಕ ಕೆಲಸಗಳಿಗಾಗಿ ರೂ. 45.55 ಲಕ್ಷ ನಗರಸಭೆ ಹಮ್ಮಿಕೊಂಡ ಖರ್ಚಿನ ಮೂಲಗಳಾಗಿವೆ.

# ಕಾಳಿ ನ್ಯೂಸ್

ಸತ್ಯ ಒಂದೇ ನೀತಿ

ಕನ್ನಡಿಗರ ಹೆಮ್ಮೆಯ ವಾರಪತ್ರಿಕೆ

ವ್ಯವಸ್ಥಾಪಕ ಸಂಪಾದಕ : ಎನ್. ಜಯಚಂದ್ರನ್ Chief Editor : N. Jayachandran

**KALI NEWS** Kannada Weekly Published from Dandeli

Regd. No. PMG/KA/NK 587 E-mail : kalinews@rediff.com

ಸಂಪುಟ-1, ಸಂಚಿಕೆ 50 RNI NO. KARKAN / 12814/10/1/2001-TC *DANDELI* 20ಏಪ್ರಿಲ್, 2002 ದೂರವಾಣಿ: 08284-33883 ಪುಟ-4 ರೂ.3.00


## ಹಸಿ ಮರ ಕಡಿದದ್ದು ಸ್ಪಷ್ಟವಾಗಿ ಕಂಡಿದ್ದೇನೆ: ಉಚ್ಛ ಮಟ್ಟದ ತನಿಖೆಗೆ ಪರಿಸರವಾದಿ ಪಾಂಡುರಂಗ ಹೆಗಡೆ ಆಗ್ರಹ

ದಾಂಡೇಲಿ: ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿಯ ಖ್ಯಾತ ಪರಿಸರವಾದಿ ಪಾಂಡುರಂಗ ಹೆಗಡೆ ದಾಂಡೇಲಿಯ ಸಮೀಪದ ಬರ್ಚಿ ವಲಯದ ಅರಣ್ಯ ಪ್ರದೇಶಗಳಿಗೆ ಸಾರ್ವಜನಿಕರ ಜೊತೆಗೂಡಿ ಬ್ಲಾಕ್ ನಂ. VII-15ಹಾಗೂ ಇನ್ನಿತರ ಬ್ಲಾಕ್‌ಗಳಲ್ಲಿ ಭೇಟಿ ನೀಡಿದಾಗ ಹಸಿ ಮರ ಕಡಿದಿದ್ದನ್ನು ತಾವು ಸ್ವತಃ ವೀಕ್ಷಿಸಿದ್ದು, ಇದು ಕಾನೂನು ಬಾಹಿರ ಕೃತ್ಯವೆಂದು ಅವರು ಹೇಳಿದ್ದಾರೆ.

ಅವರು ದಾಂಡೇಲಿಯ ಪ್ರವಾಸಿ ಮಂದಿರದಲ್ಲಿ ಅರಣ್ಯ ವೀಕ್ಷಣೆ ಮಾಡಿ ಬಂದು ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಬರ್ಚಿ ವಲಯ ಅರಣ್ಯದ ಬ್ಲಾಕ್ ನಂ.VII-15 ರಲ್ಲಿ ಬಿದ್ದ ಮತ್ತು ಒಣಗಿದ ಮರಗಳನ್ನು ಕಡಿದಿಲ್ಲ. ಅದರ ಬದಲು ಹಸಿ ಮರ ಕಡಿದದ್ದು ಸ್ಪಷ್ಟವಾಗಿ ಕಂಡು ಬಂದಿದೆ. ಅರಣ್ಯ ಇಲಾಖೆ ಬಿದ್ದು ಒಣಗಿದ ಮರಗಳನ್ನು ಕಡತಲೆ ಮಾಡುವ ಕಾಮಗಾರಿಯೆಂದು ಹೇಳಿದ್ದು ಸುಳ್ಳಾಗಿರುತ್ತದೆ. ಕಾಡಿನಲ್ಲಿ ಹಲವೆಡೆ ಬೆಂಕಿ ಹಚ್ಚಿ ಹಸಿ ಮರ ಕಡಿತದ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸಲಾಗಿದೆ. ವಿಶೇಷವೆಂದರೆ ಅತ್ಯಮೂಲ್ಯ ಬೆಲೆ ಬಾಳುವ ಸಾಗವಾನಿ ಮರಗಳನ್ನೇ ಕಡಿದಿರುವುದನ್ನು ವೀಕ್ಷಿಸಲಾಗಿದೆ. ಹಾಗೆ ಕಡಿದ ಕೆಲವು ಸಾಗವಾನಿ ಮರಗಳಿಗೆ ನಂಬರ ಸಹಿತ ಇರುವುದಿಲ್ಲ. ಇದು ಕೆಲವು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ಸ್ಥಳ ವೀಕ್ಷಣೆಯ ನಂತರ ಗಣೇಶಗುಡಿ ಸಹಾಯಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಚ್. ಬಿ. ನಾಯ್ಕ ಅವರನ್ನು ವಿಚಾರಿಸಿದಾಗ ಇದನ್ನು ಇಲಾಖೆಯ ಕಡತಲೆ ಎಂದು ಹೇಳಿದ್ದು ವಲಯ ಅರಣ್ಯಾಧಿಕಾರಿಗಳ ಮಟ್ಟದಲ್ಲಿ ಈ ಕಾಮಗಾರಿ ಆಗಿದೆ ಎಂದು ತಿಳಿಸಿದ್ದಾರೆ. ಹಸಿ ಮರ ಕಡಿದಿರುವುದನ್ನು ಸಾಬೀತುಪಡಿಸಲು ಜಂಟಿಯಾಗಿ ವೀಕ್ಷಣೆಗೆ ಆಗ್ರಹಿಸಿದಾಗ ತಾವು ಸದ್ಯ ಕಾರ್ಯದ ಒತ್ತಡದಿಂದ ಬರಲು ಸಾಧ್ಯವಿಲ್ಲವೆಂದು ತಿಳಿಸಿದರು. ಇವೆಲ್ಲವನ್ನು ಗಮನಿಸಿದಾಗ ಕಾಯ್ದೆ ಬಾಹಿರವಾಗಿ ಈ ಅರಣ್ಯ ಪ್ರದೇಶದಲ್ಲಿ ನಡೆದಿರುವ ಈ ಕೃತ್ಯವನ್ನು ಮುಚ್ಚಿ ಹಾಕುವ ಪ್ರಯತ್ನ ಕಂಡು ಬರುತ್ತಿದೆ. ಈ ಬಗ್ಗೆ ಉಚ್ಛ ಮಟ್ಟದ ತನಿಖೆಗೆ ಅವರು ಆಗ್ರಹಿಸಿದ್ದಾರೆ.



ಖ್ಯಾತ ಪರಿಸರವಾದಿ ಪಾಂಡುರಂಗ ಹೆಗಡೆ ಬರ್ಚಿವಲಯದ ಅರಣ್ಯದಲ್ಲಿ ಕಡಿದಿರುವ ಬುಡಚೆಗಳನ್ನು ಪರಿಶೀಲಿಸುತ್ತಿರುವ ದೃಶ್ಯ

## ತಾಲೂಕಾ ಕೇಂದ್ರದಲ್ಲಿರದ ಅಧಿಕಾರಿಗಳು, ಮಜಾ ಉಡಾಯಿಸಲು ಸರ್ಕಾರಿ ವಾಹನದ ಬಳಕೆ

ಹಳಿಯಾಳ: ಹಳಿಯಾಳ ತಾಲೂಕಾ ಕೇಂದ್ರ, ಈ ಕೇಂದ್ರದಲ್ಲಿ ತಾಲೂಕಿಗೆ ಸಂಬಂಧಪಟ್ಟ ಎಲ್ಲಾ ಪ್ರಮುಖ ಕಚೇರಿಗಳು ಇದೆ. ಆದರೆ ತಾಲೂಕಾ ಕೇಂದ್ರದ ಕಚೇರಿಯಲ್ಲಿರುವ ಮುಖ್ಯಸ್ಥ ಅಧಿಕಾರಿಗಳಲ್ಲಿ ಹೆಚ್ಚಿನವರು ಹಳಿಯಾಳದಲ್ಲಿ ವಾಸ್ತವ್ಯವಿಲ್ಲವೆಂದರೆ ನಂಬುತ್ತೀರಾ?

ಹೌದು! ಈ ಅಧಿಕಾರಿಗಳಿಗೆ ಹಳಿಯಾಳವೊಂದು 'ಪಿಕ್‌ನಿಕ್' ಮಾಡುವ ಜಾಗೆಯಂತಾಗಿದೆ. ಹೆಚ್ಚಾನುಹೆಚ್ಚು ಅಧಿಕಾರಿಗಳು ಧಾರವಾಡದಲ್ಲಿ ಮನೆ ಕಟ್ಟಿ ಐಷಾರಾಮವಾಗಿ ಉಳಿದು ಹಳಿಯಾಳಕ್ಕೆ, ಜನಕ್ಕೆ ಉಪದ್ರವ ನೀಡಲು ಕಾಟಾಚಾರಕ್ಕೆ ಬಂದು ಹೋಗುತ್ತಿದ್ದಾರೆ. ಸೇವಾ ಮನೋಭಾವನೆಯಿಂದಲ್ಲ. ತಾಲೂಕಾ ಕೇಂದ್ರ ಕಚೇರಿಗಳ ಮುಖ್ಯಸ್ಥರು ತಾಲೂಕಾ ಕೇಂದ್ರದಲ್ಲೇ ವಾಸ್ತವ್ಯವಿರಬೇಕು. ಆದರೆ ಹಳಿಯಾಳಕ್ಕೆ ಇವಾವುದು ಅನ್ವಯಿಸುವುದಿಲ್ಲ.

ಅನ್ವಯಿಸಿದರೂ ಅದಕ್ಕೆ ಮಾನ್ಯತೆ ಇಲ್ಲ. ಇದು ಸರ್ಕಾರದ ಹೈಟೆಕ್ ಪಾರದರ್ಶಕ ಆಡಳಿತಕ್ಕೆ ಹಿಡಿದ ಕೈಗನ್ನಡಿ. ಇದು ಒಂದೆಡೆಯಾದರೆ ಇನ್ನೊಂದೆಡೆ ಧಾರವಾಡದಿಂದ ಹಳಿಯಾಳಕ್ಕೆ ಬಸ್ಸಿನಲ್ಲಿ ಪ್ರಯಾಣ ಮಾಡುವುದು ಕಷ್ಟವಲ್ಲವೇ? ಆಫೀಸರ ಎನ್ನಿಸಿಕೊಂಡು 'ಖಡಕ್' ಇಸ್ತ್ರಿ ಬಟ್ಟೆಯನ್ನುಟ್ಟು ನೂಕು ನುಗ್ಗಲಿನಲ್ಲಿ ಬಸ್ಸಿನ ಸೀಟು ಗಿಟ್ಟಿಸುವ ತಾಪತ್ರಯವೇಕೆ? ಅದಕ್ಕೂ ಮುಂದಾಲೋಚನೆ. ಪ್ರತಿನಿತ್ಯ ಸರ್ಕಾರಿ ವಾಹನದ ದುರುಪಯೋಗ. ಈ ವಾಹನಗಳು ಸರ್ಕಾರಿ ವಾಹನ ಎನ್ನುವುದಕ್ಕಿಂತ ಅಧಿಕಾರಿಯ ಖಾಸಗಿ ವಾಹನವಾಗಿ ಮಾರ್ಪಟ್ಟಿದ್ದು ಬಾರ್, ಮಾರ್ಕೆಟ್, ಶಾಲೆ ಅಷ್ಟೇ ಏಕೆ ಸೂಳೆಯ ಮನೆಯವರೆಗೂ ಈ ವಾಹನಗಳು ಉಪಯೋಗವಾಗುತ್ತಿರುವುದು ಹಳಿಯಾಳದ ಜನತೆ ಮಾತನಾಡಿಕೊಳ್ಳುತ್ತಿದ್ದು ಅದನ್ನು ಸಹಿಸಬೇಕಾದ ಪ್ರಸಂಗ. ಏಕೆಂದರೆ ಅಧಿಕಾರಿಗಳಲ್ಲವೇ? ಸರ್ಕಾರದ ಪಾರದರ್ಶಕ ಆಡಳಿತದ ಅನುಷ್ಠಾನ ಪದ್ಧತಿ ಜಾರಿಯಲ್ಲಿ ತರುವವರು ಇವರಲ್ಲವೇ? ಜಿಲ್ಲಾ ಉಸ್ತುವಾರಿ ಸಚಿವರ ಕಠಿಣ ಶ್ರಮ, ಕ್ಷೇತ್ರದ ಅಭಿವೃದ್ಧಿ, ಜಿಲ್ಲೆಯಾದ್ಯಂತ ಪಾರದರ್ಶಕ ಆಡಳಿತದ ಎಚ್ಚರಿಕೆಯ ಕರೆಗಳು ತವರೂರಿನ ಹಳಿಯಾಳದಲ್ಲಿ ಜಾರಿಗೊಳ್ಳದೆ ಇರುವುದನ್ನು ವಿರೋಧಿಗಳು ಮುಸಿ, ಮುಸಿ ನಕ್ಕು ವಾಹನಗಳ ದುರುಪಯೋಗ, ಕೇಂದ್ರ ಸ್ಥಾನದಲ್ಲಿರದ ಅಧಿಕಾರಿಗಳ ಪಟ್ಟಿ ಮಾಡುತ್ತಾ ಜಿ. ಪಂ. ಇಂ., ಅರಣ್ಯ, ನೀರಾವರಿ, ಕೃಷಿ, ಶಿಕ್ಷಣ, ತಾ. ಪಂ., ತೋಟಗಾರಿಕೆ ಹೀಗೆ ಅಧಿಕಾರಿಗಳ ಪಟ್ಟಿ ಮಾಡುತ್ತಾರೆಯೇ ವಿನಃ ಅದನ್ನು ಪ್ರತಿಭಟಿಸುವ ಧ್ವನಿ ಕಳೆದುಕೊಂಡು ಜಿಲ್ಲೆಯ ಉಳಿದೆಡೆ ಎಂತಹ ಪಾರದರ್ಶಕ ಆಡಳಿತ ಇರಬಹುದು ಎಂದು ಲೇವಡಿ ಮಾಡುತ್ತಿರುವುದು ಅಷ್ಟೇ ಸತ್ಯ. ಆದರೆ ಇನ್ನಾದರೂ ಸ್ಥಳೀಯ ಮಂತ್ರಿಗಳು, ಶಾಸಕರು ಜನತೆಯ ಹಿತದೃಷ್ಟಿಯಿಂದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿರುವಂತೆ ಹಾಗೂ ಸರ್ಕಾರಿ ವಾಹನಗಳ ದುರುಪಯೋಗವಾಗದಂತೆ ತಡೆಗಟ್ಟಲು ಕ್ರಮ ಜರುಗಿಸಬೇಕಾಗಿದೆ.

(ಸಂಜಯ ಪಾಟೀಲ)

### ಓದುಗರಲ್ಲಿ ವಿನಂತಿ

ನಗರದಲ್ಲಿ ಉಂಟಾದ ಬಿರುಸಿನ ಸಿಡಿಲು, ಮಳೆ, ಗಾಳಿಗಳಿಂದಾಗಿ ಎರಡು- ಮೂರು ದಿನ ವಿದ್ಯುತ್ ವ್ಯತ್ಯಯ ಉಂಟಾಗಿ ಕಂಪ್ಯೂಟರ್ ಹಾಗೂ ವಿದ್ಯುತ್ ಸಲಕರಣೆಗಳಿಗೆ ದೋಷ ಉಂಟಾದ್ದರಿಂದ ಈ ವಾರ ಕೇವಲ ನಾಲ್ಕು ಪುಟಗಳ ಸಂಚಿಕೆ ನೀಡಲಾಗುತ್ತಿದೆ. ಓದುಗರು ಸಹಕರಿಸಬೇಕಾಗಿ ವಿನಂತಿ.

(ಸಂ.)

# ಕಾಳಿ ನ್ಯೂಸ್

ಸತ್ಯ ಒಂದೇ ನೀತಿ

ಕನ್ನಡಿಗರ ಹೆಮ್ಮೆಯ ವಾರಪತ್ರಿಕೆ

ವ್ಯವಸ್ಥಾಪಕ ಸಂಪಾದಕ : ಎನ್. ಜಯಚಂದ್ರನ್ Chief Editor : N. Jayachandran

**KALI NEWS** Kannada Weekly Published from Dandeli

Regd. No. PMG/KA/NK 587 E-mail : kalinews@rediff.com

ಸಂಪುಟ-1, ಸಂಚಿಕೆ 51 RNI NO. KARKAN / 12814/10/1/2001-TC *DANDELI* 27ಎಪ್ರೀಲ್, 2002 ದೂರವಾಣಿ: 08284-33883 ಪುಟ-6 ರೂ. 3.00


ಬರ್ಚಿ ವಲಯ ಅರಣ್ಯಾಧಿಕಾರಿ

## ಎಸ್. ಎಂ. ಸಂಗೊಳ್ಳಿ ಅಮಾನತ್ತು

### ತನಿಖಾ ಕಾರ್ಯ ಆರಂಭ

ದಾಂಡೇಲಿ: ಬರ್ಚಿ ವಲಯ ಅರಣ್ಯಾಧಿಕಾರಿ ಎಸ್. ಎಂ. ಸಂಗೊಳ್ಳಿ ಅವರನ್ನು ಬೆಂಗಳೂರಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರು ಅಮಾನತ್ತುಗೊಳಿಸಿದ್ದಾರೆ. ಸಿಂಗಟಗೇರಿ ವನಪಾಲಕ ಆರ್. ಎನ್. ಶೇಠ ಅವರು ಅಮಾನತ್ತುಗೊಂಡಿದ್ದಾರೆ.

ಇತ್ತೀಚೆಗೆ ಜಗಲಬೇಟ ಡಿಪೋದಿಂದ ರಾಜಶೇಖರ ಅಂಗಡಿ ಎನ್ನುವವರ ಹೆಸರಿನಲ್ಲಿ 63 ಸಾವಿರ ರೂಪಾಯಿ ಮೌಲ್ಯದ ಸಾಗವಾನಿ ಎಳೆಗಳನ್ನು ಖರೀದಿಸಿ ಎಳೆಗಳ ಬದಲ 10 ಲಕ್ಷ ರೂಪಾಯಿ ಮೌಲ್ಯದ ಸಾಗವಾನಿ ನಾಟುಗಳನ್ನು ಸಾಗಿಸಿ ಖಾನಾಪುರದ ಕುಲವಳ್ಳಿಯಲ್ಲಿ ವಲಯ ಅರಣ್ಯಾಧಿಕಾರಿ ಎಸ್. ಎಂ. ಸಂಗೊಳ್ಳಿಯವರ ಹೊಲದಲ್ಲಿ ಸಂಗ್ರಹಿಸಿಟ್ಟಿದ್ದನ್ನು ಬೆಳಗಾವಿಯ ಅರಣ್ಯ ಸಂಚಾರಿ ವೀಚಕ್ಷಕ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ. ದೊರೈಸ್ವಾಮಿ ದಾಳಿ ನಡೆಸಿ ಲಾರಿ ಸಮೇತ ವಶಪಡಿಸಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು. (ಪತ್ರಿಕೆ ವಿವರವಾದ ವರದಿ ಪ್ರಕಟಿಸಿತ್ತು).

ಬರ್ಚಿ ವಲಯದ ಅರಣ್ಯದಲ್ಲಿ ಹಸಿ ಮರಗಳನ್ನು ಇಲಾಖೆಯ ಅನುಮತಿ ಇಲ್ಲದೇ ಕಡಿದಿರುವ ಪ್ರಕರಣ ಇದೀಗ ಬೆಳಕಿಗೆ ಬಂದಿದ್ದು ತನಿಖೆ ಆರಂಭಗೊಂಡಿದ್ದು ವಲಯ ಅರಣ್ಯಾಧಿಕಾರಿ ಅಮಾನತ್ತುಗೊಂಡಿದ್ದು ಸದರಿ ಪ್ರಕರಣದಲ್ಲಿ ವನಪಾಲಕ ಹಾಗೂ ಬೀಟ್‌ಗಾರ್ಡ್ ಅಮಾನತ್ತುಗೊಳ್ಳುವ ಸಾಧ್ಯತೆ ಇದೆ.

ಈ ಹಗರಣಕ್ಕೆ ಸಂಬಂಧಪಟ್ಟಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ. ದೊರೈಸ್ವಾಮಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬೆಂಗಳೂರು ಅವರಿಗೆ ಸಲ್ಲಿಸಿದ ವಿವರವಾದ ವರದಿಯನ್ನು ನೀಡಲಾಗಿದೆ.

2ನೇ ಪುಟಕ್ಕೆ. . . .

ಹಳಿಯಾಳ ಕ್ಷೇತ್ರ ಸಂಪನ್ಮೂಲಾಧಿಕಾರಿ ಸಿ. ಎಸ್. ನಾಯ್ಕರ

# ತುಘಲಕ್ ದರ್ಭಾರ ?

ಹಳಿಯಾಳ: ಕರ್ನಾಟಕ ಘನ ಕಾಂಗ್ರೆಸ್ ಸರ್ಕಾರ ಶಿಕ್ಷಣದ ಸಲುವಾಗಿ ಪ್ರತಿ ಜಿಲ್ಲೆ ತಾಲೂಕಿಗೆ ಕೋಟಿಗಟ್ಟಲೆ ಹಣ ಬಿಡುಗಡೆ ಮಾಡಿ ಸರ್ವ ಮಕ್ಕಳಿಗೂ ಶಿಕ್ಷಣ ಅಭಿಯಾನ ಎಂಬ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ವಾಗತಾರ್ಹವಾಗಿದೆ. ಆದರೆ ಬಿಡುಗಡೆ ಆದ ಹಣ ಸರಿಯಾದ ರೀತಿಯಲ್ಲಿ ಬಳಕೆಯಾಗದೆ ಕೆಲವರ ಜೇಬು ತುಂಬುತ್ತಿರುವ ಅಂಶ ತಡವಾಗಿ ಬೆಳಕಿಗೆ ಬಂದಿದೆ. ಇಂತಹ ಒಂದು ಅವ್ಯವಹಾರ ಹಳಿಯಾಳದ ಕ್ಷೇತ್ರ ಸಂಪನ್ಮೂಲ ಕಛೇರಿಯಲ್ಲಿ ನಡೆದಿರುವುದು ದುರದೃಷ್ಟಕರ ಸಂಗತಿ. ಹಳಯಾಳ-ಧಾರವಾಡ ರಸ್ತೆಯಲ್ಲಿ ಎ. ಪಿ. ಎಂ. ಸಿ. ಆವರಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯವರ ಆಧೀನದಲ್ಲಿ ಕ್ಷೇತ್ರ ಸಂಪನ್ಮೂಲ ಕಛೇರಿ ಇದೆ. ಇಲ್ಲಿನ ಅಧಿಕಾರಿ ಸಿ. ಎನ್. ನಾಯ್ಕ ಈ ಕಛೇರಿಯಲ್ಲಿ ದಿನ ಬೆಳಗಾದರೆ ಶಿಕ್ಷಕರಿಗೆ ಒಂದಿಲ್ಲೊಂದು ತರಬೇತಿ ನಡೆಸುತ್ತಾರೆ. ಚೈತನ್ಯ, ನಲಿಕಲಿ, ವಿಷಯಾಧಾರಿತ ತರಬೇತಿ. ಮುಖ್ಯೋಪಾಧ್ಯಾಯರಿಗೆ ಜಾಗ್ರತಿ ಎಂಬ ಹೆಸರಲ್ಲಿ ತರಬೇತಿ ನಡೆಯುತ್ತಿದ್ದು ಈ ತರಬೇತಿಗೆ ಬಂದ ಶಿಕ್ಷಕ ಶಿಕ್ಷಕಿಯರು ಜಾಗ್ರತರಾಗುವ ಬದಲು ಅಧಿಕಾರಿಯ ಕೃಪಾಕಟಾಕ್ಷದಿಂದ ಅಜಾಗ್ರತರಾಗಿ ಹೊರ ಬರುತ್ತಾರೆ. ತರಬೇತಿ ನಡೆಯುವ ಸಮಯದಲ್ಲಿ ಸರಿಯಾಗಿ ತರಬೇತಿ ನೀಡಲಾಗುತ್ತದೆ. ಆದರೆ ಹಣದ ವ್ಯವಹಾರದಲ್ಲಿ ಮಾತ್ರ ನಾಯ್ಕ ಸಾಹೇಬರು ಬಹಳ ಕಟ್ಟುನಿಟ್ಟು. ತಮ್ಮಿಂದ ಎಷ್ಟು ಹಣ ಸುಲಿಯಲು ಆಗುತ್ತದೋ ಅಷ್ಟನ್ನು ಸುಲಿದೇ ಕಳಿಸುತ್ತಾರೆ. ತರಬೇತಿಗೆ ಬರುವ ಶಿಕ್ಷಕ - ಶಿಕ್ಷಕಿಯರು ಬೆಳಿಗ್ಗೆಯಿಂದ ರಾತ್ರಿಯವರೆಗೆ ಮನೆಯಲ್ಲಿ ತಮ್ಮ ಮಕ್ಕಳನ್ನು ಬಿಟ್ಟು ಚಿಂತಿತರಾಗಿದ್ದರೆ ಊಟದ ಸಮಯ ಬಂದ ಕೂಡಲೇ ಬೆಚ್ಚಿ ಬೀಳುತ್ತಾರೆ. ಇವರಿಗೆ ಕಳಪೆ ದರ್ಜೆಯ ಊಟವನ್ನು ನೀಡಲಾಗುತ್ತದೆ. ಒಳ್ಳೆಯ ಹೊಟೇಲ್ ಇದ್ದರೂ ಸಹ ಅಲ್ಲಿಂದ ಯಾವುದೇ ರೀತಿಯ ಆಹಾರ ತರಿಸದೇ ಅಲ್ಲಿನ ಸಮೀಪದ ಒಂದು ಹೊಟೇಲದಿಂದ ಊಟಕ್ಕೆ ಉಪಹಾರ ತರಿಸಲಾಗುತ್ತದೆ. ಇದನ್ನು ತಿಂದ ಅನೇಕ ಶಿಕ್ಷಕರ ಆರೋಗ್ಯ ಹದಗೆಟ್ಟಿದ್ದು ಸುಳ್ಳನಲ್ಲ. ಸರ್ಕಾರ ಪ್ರತಿಯೊಬ್ಬ ಶಿಕ್ಷಕರಿಗೆ ಪ್ರತಿ ದಿನ 2 ಊಟ, 1 ಉಪಹಾರ ಪ್ರಯಾಣ ಭತ್ಯೆ ಮತ್ತು ಅಲ್ಪ ಪ್ರಮಾಣದ ದಿನ ಭತ್ಯೆ ನೀಡಬೇಕೆಂಬ ಆದೇಶವಿದೆ. ಹೀಗಿದ್ದಾಗ ತರಬೇತಿ ಮುಗಿದ ನಂತರ ಶಿಕ್ಷಕರ ಗಮನಕ್ಕೆ ತರದೇ ಯಾವುದೇ ಹಣದ ಖರ್ಚನ್ನು ನಮೂದಿಸದೇ ಕೇವಲ ಬಿಳಿ ಹಾಳೆಯ ಮೇಲೆ ಶಿಕ್ಷಕರ ಸಹಿ ಪಡೆಯಲಾಗುತ್ತದೆ. ಈ ಶಿಕ್ಷಕರು ಸಹ ಕುರಿಗಳ ಹಾಗೆ ಸಹಿ ಮಾಡಿ ಅಲ್ಲಿಂದ ಹೊರ ಬಿದ್ದು ನಂತರ ಶಾಪ ಹಾಕುವುದು ಸರ್ವ ಸಾಮಾನ್ಯವಾಗಿದೆ. ಶಿಕ್ಷಣ ಪಡೆದು ಶಿಕ್ಷಣ ನೀಡುವ ಶಿಕ್ಷಕರ ಗತಿಯೇ ಹೀಗಾದರೆ ಇನ್ನೂ ಉಳಿದವರ ಗತಿ ಏನು? ಸರ್ಕಾರದಿಂದ ಅಪಾರ ಹಣ ಬರುತ್ತಿರುವಾಗಲು ಈ ಕಛೇರಿ ಮೂಲಭೂತ ಸೌಕರ್ಯದಿಂದ ವಂಚಿತವಾಗಿದೆ. ಇಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲವಾಗಿದೆ. ಇದರಿಂದಾಗಿ ಶಿಕ್ಷಕಿಯರ ಪಾಡು ಹೇಳತೀರದು. ಇಂತಹ ಒಂದು ವ್ಯವಸ್ಥೆಯನ್ನು ಕಲ್ಪಿಸದೇ ಕೇವಲ ತಮ್ಮ ಜೇಬುಗಳನ್ನು ತುಂಬಿಸುವ ಕಾರ್ಯದಲ್ಲಿ ನಿರತರಾಗಿರುವ ಈ ಅಧಿಕಾರಿ ಮೇಲಾಧಿಕಾರಿಗಳಿಗೂ ಸಮಯಕ್ಕೆ ಸರಿಯಾಗಿ ಕಪ್ಪ ಸಲ್ಲಿಸಿ ಉತ್ತಮ ಅಧಿಕಾರಿ ಎಂಬ ಬಿರುದು ಗಳಿಸಿದ್ದು ಯಾವ ಪುರುಷಾರ್ಥಕ್ಕೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಇನ್ನೂ ಮೇಲಾದರೂ ಈ ಅಧಿಕಾರಿಗಳು ಶಿಕ್ಷಣದ ಗುಣಮಟ್ಟ ಸುಧಾರಿಸುವಲ್ಲಿ ತಮ್ಮ ಆಸಕ್ತಿ ತೋರಿಸುವರೇ ಕಾದು ನೋಡಬೇಕಾಗಿದೆ.

## ಹಳಿಯಾಳ ತಹಶೀಲ್ದಾರ ಕಛೇರಿಯಲ್ಲಿ : ಕಂಪ್ಯೂಟರ್ ಅವಾಂತರ !

## ಮಹಾರಾಷ್ಟ್ರ ಅಪೆಕ್ಸ ಬ್ಯಾಂಕ ವ್ಯವಹಾರ ಸ್ಥಗಿತ -ತತ್ತರಿಸಿದ ಹಳಿಯಾಳ ಜನತೆ

